# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ದಾವಣಗೆರೆ
ಶುಕ್ರವಾರ, ಜುಲೈ 30, 2021

ಸಂಪುಟ : 48 ಸಂಚಿಕೆ : 77 ☎ 254736 91642 99999 RNI No: 27369/75 KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ರಾಜ್ಯದಲ್ಲಿ ಶಾಲಾರಂಭಕ್ಕೆ ಒತ್ತಾಯ

**ಬಿಹಾರ, ಹಿಮಾಚಲ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಶಾಲೆ ತೆರೆಯಲಾಗಿದೆ**

**ಸೆರೋ ಸಮೀಕ್ಷೆಯ ಪ್ರಕಾರ ಸಾಕಷ್ಟು ಮಕ್ಕಳಲ್ಲಿ ಈಗಾಗಲೇ ಕೊರೊನಾ ಆಂಟಿಬಡಿ ಇದೆ ಎಂದ ವೈದ್ಯರು, ವಿಜ್ಞಾನಿಗಳು**

ನವದೆಹಲಿ, ಜು. 29 - ದೆಹಲಿ, ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ಶಾಲೆಗಳನ್ನು ಆರಂಭಿಸುವಂತೆ 50ಕ್ಕೂ ಹೆಚ್ಚು ಐ.ಐ.ಟಿ. ಪದವೀಧರರು, ವೈದ್ಯರು, ವಿಜ್ಞಾನಿಗಳು ಹಾಗೂ ಪೋಷಕರು ಆಯಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಶಾಲೆಗಳನ್ನು ಮುಚ್ಚಿರುವ ಕಾರಣ ಮಕ್ಕಳು ಕಲಿಕೆ ಹಾಗೂ ಅಭಿವೃದ್ಧಿಯಿಂದ ವಂಚಿತವಾಗುವ ಪ್ರಮಾಣ ಹೆಚ್ಚಾಗುತ್ತಿದೆ. ಶಾಲೆಗಳನ್ನು ಸುರಕ್ಷಿತ ಮಾನದಂಡಗಳೊಂದಿಗೆ ತೆರೆಯಬಹುದು ಎಂಬುದಕ್ಕೆ ವೈಜ್ಞಾನಿಕ ಸಾಕ್ಷಿಗಳಿವೆ ಎಂದು ಈ ಪರಿಣಿತರು ಹೇಳಿದ್ದಾರೆ.

ಶಾಲೆಗಳನ್ನು ಪೂರ್ಣವಾಗಿ ಇಲ್ಲವೇ ಭಾಗಶಃವಾದರೂ ತೆರೆಯಬೇಕು. ವಿಶ್ವದ 170ಕ್ಕೂ ಹೆಚ್ಚು ದೇಶಗಳಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಕೊರೊನಾ ಸಂದರ್ಭದಲ್ಲಿ ಫ್ರಾನ್ಸ್ ಹಾಗೂ ಸ್ವೀಡನ್ ಮುಂತಾದ ದೇಶಗಳಲ್ಲಿ ಶಾಲೆಗಳನ್ನು ಮುಚ್ಚಿರಲಿಲ್ಲ ಎಂದವರು ಹೇಳಿದ್ದಾರೆ.

ಕೊರೊನಾ ಕೊರೊನಾ ಎಂದು ಲಾಕ್‌ಡೌನ್ ಮಾಡುವಾಗ ಕೊನೆಯ ಘಟ್ಟದಲ್ಲಿ ಶಾಲೆಗಳನ್ನು ಮುಚ್ಚಬೇಕು ಹಾಗೂ ಅನ್‌ಲಾಕ್ ಮಾಡುವಾಗ ಶಾಲೆಗಳಿಗೆ ಮೊದಲ ಆದ್ಯತೆ ಇರಬೇಕು ಎಂದು ಯುನಿಸೆಫ್ ಹಾಗೂ ಯುನೆಸ್ಕೋಗಳು ಹೇಳಿವೆ. ಪೂರ್ವ ಪ್ರಾಥಮಿಕ ಹಾಗೂ ಪ್ರಾಥಮಿಕ ಶಾಲೆಗಳನ್ನು ತೆರೆಯುವುದರಿಂದ ಮಕ್ಕಳಿಗೆ ಅತ್ಯಂತ ಕಡಿಮೆ ಅಪಾಯ ಇದೆ. ದೊಡ್ಡವರಿಗಿಂತ ಮೊದಲು ಚಿಕ್ಕವರ ಶಾಲೆ ತೆರೆಯಬೇಕು ಎಂದವರು ತಿಳಿಸಿದ್ದಾರೆ.

ಕೊರೊನಾದ ಎರಡನೇ ಅಲೆ ತೀವ್ರತೆ ತಗ್ಗಿದ ನಂತರ ಬಿಹಾರ ಹಾಗೂ ಹಿಮಾಚಲ ಪ್ರದೇಶ ಸೇರಿದಂತೆ, ಹಲವೆಡೆ ಶಾಲೆಗಳನ್ನು ತೆರೆಯಲಾಗಿದೆ. ದೆಹಲಿ, ಮಹಾರಾಷ್ಟ್ರ ಹಾಗೂ ಕರ್ನಾಟಕಗಳಲ್ಲಿ ಶಾಲಾರಂಭಕ್ಕೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ.

ಅಕ್ಟೋಬರ್ ನಂತರದಲ್ಲಿ ಶಾಲೆಗಳ ಆರಂಭಕ್ಕೆ 'ಪರಿಗಣಿಸಲಾಗುವುದು' ಎಂದು ಕರ್ನಾಟಕ ಸರ್ಕಾರ ತಿಳಿಸಿದೆ.

ಈ ಹಿನ್ನೆಲೆಯಲ್ಲಿ ಪತ್ರಕ್ಕೆ ಸಹಿ ಹಾಕಿರುವ ದೆಹಲಿ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಜೀನ್ ಡ್ರೆಜೆ, ಐಐಟಿ ಮುಂಬೈನ ಪ್ರೊ. ಭಾಸ್ಕರನ್ ರಮಣ್ ಮತ್ತಿತರರು ಶಾಲೆಗಳನ್ನು ಶೀಘ್ರವಾಗಿ ತೆರೆಯುವಂತೆ ಒತ್ತಾಯಿಸಿದ್ದಾರೆ.

ಬಹುತೇಕರಿಗೆ ಲಸಿಕೆ ಸಿಗುವವರೆಗೂ ಶಾಲೆಗಳನ್ನು ತೆರೆಯುವುದಿಲ್ಲ (2ನೇ ಪುಟಕ್ಕೆ)

# ವೈದ್ಯಕೀಯ ಕೋರ್ಸ್‌ಗಳಿಗೆ ಒಬಿಸಿ-ಆರ್ಥಿಕ ಮೀಸಲಾತಿ

ನವದೆಹಲಿ, ಜು. 29 – ಅಖಿಲ ಭಾರತ ಕೋಟಾ ಯೋಜನೆಯಡಿ ವೈದ್ಯಕೀಯ ಯು.ಜಿ. ಹಾಗೂ ಪಿ.ಜಿ. ಯಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಶೇ.27 ಹಾಗೂ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಿ, ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಇದು ಪ್ರಸಕ್ತ ವರ್ಷದಿಂದಲೇ ಎಂ.ಬಿ.ಬಿ.ಎಸ್. ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಅನ್ವಯವಾಗಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸೋಮವಾರ ನಡೆಸಿದ ಸಭೆಯಲ್ಲಿ ಮೀಸಲಾತಿ ಕಲ್ಪಿಸಲು ಸೂಚನೆ ನೀಡಿದ್ದರು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಸರ್ಕಾರದ ನಿರ್ಧಾರದಿಂದ ಎಂಬಿಬಿಎಸ್‌ನಲ್ಲಿ 1,500 ಒ.ಬಿ.ಸಿ. ವಿದ್ಯಾರ್ಥಿಗಳಿಗೆ ಹಾಗೂ ಪಿ.ಜಿ.ಯಲ್ಲಿ 2,500 ಒ.ಬಿ.ಸಿ. ವಿದ್ಯಾರ್ಥಿಗಳಿಗೆ ನೆರವಾಗಲಿದೆ. ಎಂಬಿಬಿಎಸ್‌ನಲ್ಲಿ 550 ಆರ್ಥಿಕವಾಗಿ ಹಿಂದುಳಿದ ಮತ್ತು ಪಿ.ಜಿ.ಯಲ್ಲಿ 1,000 ಆರ್ಥಿಕವಾಗಿ ಹಿಂದುಳಿದವರಿಗೆ ಸೀಟುಗಳು ಸಿಗಲಿವೆ.

ಸರ್ಕಾರ ಹಿಂದುಳಿದ ವರ್ಗಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಬ್ಬರಿಗೂ ಮೀಸಲಾತಿ ನೀಡಲು ಬದ್ಧವಾಗಿದೆ. ಈ ಹಿನ್ನೆಲೆಯಲ್ಲಿ ವೈದ್ಯಕೀಯ ಸೀಟುಗಳಲ್ಲಿ ಈ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ



**ಆದೇಶ ಹೊರಡಿಸಿದ ಕೇಂದ್ರ**

**ಪ್ರಸಕ್ತ ವರ್ಷದಿಂದಲೇ ಎಂ.ಬಿ.ಬಿ. ಎಸ್. ಹಾಗೂ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಅನ್ವಯ**

ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದೆ ಎಂದು ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

1986ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಲ್ಲ ರಾಜ್ಯಗಳ ಪ್ರತಿಭಾವಂತ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯುವಂತಾಗಲು ಅಖಿಲ ಭಾರತ ಕೋಟಾ ರೂಪಿಸಲಾಗಿತ್ತು. ಈ ಯೋಜನೆಯ ಅನ್ವಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎಂ.ಬಿ.ಬಿ.ಎಸ್.ನಲ್ಲಿ ಶೇ.15 ಹಾಗೂ ಪಿ.ಜಿ.ಯಲ್ಲಿ ಶೇ.50 ಸ್ಥಾನಗಳನ್ನು ಕೇಂದ್ರ ಸರ್ಕಾರ ಪಡೆದುಕೊಳ್ಳುತ್ತದೆ.

ಆರಂಭದಲ್ಲಿ ಈ ಕೋಟಾಗೆ ಮೀಸಲಾತಿ ಇರಲಿಲ್ಲ. 2007ರಲ್ಲಿ ಸುಪ್ರೀಂ ಕೋರ್ಟ್ ಪರಿಶಿಷ್ಟ ಜಾತಿಯವರಿಗೆ ಶೇ.15 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.7.5ರ ಮೀಸಲಾತಿ ಕಲ್ಪಿಸಿತ್ತು.

ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಲು ಸಂವಿಧಾನಕ್ಕೆ 2019ರಲ್ಲಿ ತಿದ್ದುಪಡಿ ತರಲಾಗಿತ್ತು. ಈ ತಿದ್ದುಪಡಿಯ ಅನ್ವಯ ಆರ್ಥಿಕವಾಗಿ ಹಿಂದುಳಿದವರಿಗೆ ಶೇ.10ರ ಮೀಸಲಾತಿ ಕಲ್ಪಿಸಲು 2019-20 ಹಾಗೂ 2020-21ರಲ್ಲಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಸಾಮರ್ಥ್ಯವನ್ನು ಶೇ.10ರಷ್ಟು ಹೆಚ್ಚಿಸಲಾಗಿತ್ತು. ಆದರೂ, ಇದುವರೆಗೆ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಿರಲಿಲ್ಲ.

2014ರ ನಂತರ ಕಳೆದ ಆರು ವರ್ಷಗಳಲ್ಲಿ ದೇಶದಲ್ಲಿ ಎಂ.ಬಿ.ಬಿ.ಎಸ್. ಸೀಟುಗಳ ಸಂಖ್ಯೆಯನ್ನು 54,384 ರಿಂದ 84,649ಕ್ಕೆ ಹೆಚ್ಚಿಸಲಾಗಿದೆ. ಇದು ಶೇ.56ರ ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ (3ನೇ ಪುಟಕ್ಕೆ)

# ಸಂಪುಟ: ವರಿಷ್ಠರಿಗೆ ಸಂಘ ಪರಿವಾರದಿಂದ ಪಟ್ಟಿ ರವಾನೆ

## ಪ್ರಾಂತ್ಯ, ಜಾತಿವಾರು ಪ್ರಾತಿನಿಧ್ಯದಲ್ಲಿ 30 ಜನರ ಹೆಸರು ಶಿಫಾರಸ್ಸು

ಬೆಂಗಳೂರು, ಜು. 19 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂತ್ರಿಮಂಡಲದ ಬಗ್ಗೆ ಸಂಘ ಪರಿವಾರ 30 ಜನರ ಹೆಸರನ್ನು ದೆಹಲಿ ನಾಯಕರಿಗೆ ಶಿಫಾರಸ್ಸು ಮಾಡಿದೆ.

ಸಂಘದ ಉನ್ನತ ನಾಯಕರಲ್ಲೊಬ್ಬರಾದ ಮುಕುಂದ್ ಜಿ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಗರದ ಕೇಶವ ಕೃಪಾದಲ್ಲಿ ನಡೆದ ಸಭೆಯಲ್ಲಿ 30 ಸದಸ್ಯರ ಹೆಸರನ್ನು ಸಿದ್ಧಪಡಿಸಿ, ದೆಹಲಿಯ ವರಿಷ್ಠರಿಗೆ ರವಾನೆ ಮಾಡಲಾಗಿದೆ.

ಈ ಪಟ್ಟಿಯಲ್ಲಿ ಯಡಿಯೂರಪ್ಪ ಸಂಪುಟದಲ್ಲಿ ಆರೋಪದ ಸುಳಿಗೆ ಸಿಲುಕಿದವರನ್ನು ದೂರವಿಟ್ಟಿದ್ದು, ಸಂಘ ಪರಿವಾರ ಮತ್ತು ಪಕ್ಷದ ಸಂಘಟನೆಗೆ ಒತ್ತು ನೀಡುವವರಿಗೆ ಹೆಚ್ಚಿನ ಅವಕಾಶ ದೊರೆತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಹಿರಿಯರು ಮತ್ತು ಯುವಕರಿಗೆ ಸಮನಾದ ಅವಕಾಶವನ್ನು ಕಲ್ಪಿಸಲಾಗಿದ್ದು, ಜಿಲ್ಲೆ ಮತ್ತು ಜಾತಿಗಳಿಗೂ ಪ್ರಾತಿನಿಧ್ಯ ಕೊಟ್ಟಿದ್ದಾರೆ.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭಗಳಲ್ಲಿ ಸತತವಾಗಿ ಸಚಿವರಾಗಿರುವವರನ್ನು ಬೊಮ್ಮಾಯಿ ಸರ್ಕಾರದಿಂದ ದೂರವಿಟ್ಟು, ಅವರನ್ನು ಪಕ್ಷ ಸಂಘಟನೆಯಲ್ಲಿ ಬಳಸಿಕೊಳ್ಳಲು ನಿರ್ಧರಿಸಲಾಗಿದೆ.

ಇದರಲ್ಲಿ ಕೆಲವರಿಗೆ ಬೊಮ್ಮಾಯಿ ಸಂಪುಟದಲ್ಲಿ ಸೇರುವುದಿಲ್ಲವೆಂದು ಸ್ವಯಂ ಪ್ರೇರಿತವಾಗಿ ಹೇಳಿಕೆ ನೀಡುವಂತೆ ಸಂದೇಶ ರವಾನೆ ಮಾಡಲಾಗಿದೆ. ಈಗಾಗಲೇ ಜಗದೀಶ್ ಶೆಟ್ಟರ್ ಇಂತಹ ನಿರ್ಧಾರವನ್ನು ಪ್ರಕಟಿಸಿದ್ದಾರೆ.

ಇನ್ನೂ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲು ಕಾರಣರಾದ ಕಾಂಗ್ರೆಸ್-ಜೆಡಿಎಸ್‌ನಿಂದ ಹೊರ ಬಂದು ಸಚಿವರಾದವರಿಗೆ ಹೊಸ ಸರ್ಕಾರದಲ್ಲಿ ಕೊಕ್ ನೀಡಲಾಗಿದೆ.

ಅದರಲ್ಲಿ ಏಳು ಮಂದಿ ಭ್ರಷ್ಟಾಚಾರ ಆರೋಪಗಳಿಗೆ ಸಿಲುಕಿದ್ದಾರೆ, ಅಂತಹವರು ಬೊಮ್ಮಾಯಿ ಸಂಪುಟದಲ್ಲಿ ಮಂತ್ರಿಯಾಗುವುದು ಕ್ಲಿಷ್ಟಕರ ಎನ್ನಲಾಗುತ್ತಿದೆ.


ಗುರುವಾರದ ಸಭೆಯಲ್ಲಿ ಮುಕುಂದ್ ಅಲ್ಲದೆ, ಸಂಘದ ಹಿರಿಯ ಸದಸ್ಯರಾದ ತಿಪ್ಪೇಸ್ವಾಮಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಸೇರಿದಂತೆ, 7 ಮಂದಿ ಇದ್ದರು.

ಸಂಘ ಪರಿವಾರದ ನಿರ್ಧಾರ ಗೊತ್ತಾಗುತ್ತಿದ್ದಂತೆ ಬಿಜೆಪಿ ಸರ್ಕಾರದಲ್ಲಿ ಸತತವಾಗಿ ಮಂತ್ರಿಯಾಗಿದ್ದ ಆರ್. ಅಶೋಕ್, ಸಿ.ಪಿ. ಯೋಗೇಶ್ವರ್ ಸೇರಿದಂತೆ ಸಚಿವ ಆಕಾಂಕ್ಷಿಗಳು ದಿಢೀರನೇ ದೆಹಲಿಗೆ ತೆರಳಿದ್ದಾರೆ.

ಮತ್ತೊಂದೆಡೆ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ ಮಂತ್ರಿ ಸ್ಥಾನ ಕೊಟ್ಟರೆ ಕೆಲಸ ಮಾಡುತ್ತೇನೆ. ಇಲ್ಲದಿದ್ದರೆ, ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವುದಾಗಿ ಹೇಳಿಕೊಂಡಿದ್ದಾರೆ. ಈ ಮಧ್ಯೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನಾಳೆ ದೆಹಲಿಗೆ ತೆರಳುವ ಸಾಧ್ಯತೆ ಇದೆ. ಈ ಭೇಟಿ ಸಂದರ್ಭದಲ್ಲೇ ಮಂತ್ರಿಮಂಡಲ ರಚನೆಗೆ ಸಂಬಂಧಿಸಿದಂತೆ (2ನೇ ಪುಟಕ್ಕೆ)

## ಒಳ್ಳೆಯ ಆಡಳಿತದಿಂದ ಹೆಸರು ತನ್ನಿ

### ಸಿಎಂ ಬೊಮ್ಮಾಯಿಗೆ ಪ್ರಧಾನಿ ಮೋದಿ ಕಿವಿಮಾತು





ಬೆಂಗಳೂರು, ಜು. 29 - ಕರ್ನಾಟಕದಲ್ಲಿ ಒಳ್ಳೆಯ ಆಡಳಿತ ನೀಡಿ, ಪಕ್ಷಕ್ಕೆ ಹೆಸರು ತನ್ನಿ ಎಂದು ಪ್ರಧಾನಿ ನರೇಂದ್ರ ಮೋದಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಿವಿಮಾತು ಹೇಳಿದ್ದಾರೆ.

ಮುಖ್ಯಮಂತ್ರಿಯಾಗಿ ನಿನ್ನೆ ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಪ್ರಧಾನಿಯವರು ಬೊಮ್ಮಾಯಿ ಅವರಿಗೆ ಕರೆ ಮಾಡಿ, ಒಳ್ಳೆಯ ಆಡಳಿತ ನೀಡುತ್ತೀರಿ ಎಂಬ ವಿಶ್ವಾಸ ನನಗಿದೆ, ನಿಮಗೆ ನಾನು ಶುಭ ಹಾರೈಸುತ್ತೇನೆ ಎಂದಿದ್ದಾರೆ.

ಕರ್ನಾಟಕದ ಕೆಲವು ಭಾಗಗಳಲ್ಲಿ ನೆರೆಯಿಂದ ಹಾನಿಯಾಗಿದೆ, ಮೊದಲು ಅತ್ತಕಡೆ ಗಮನಹರಿಸಿ, ನಂತರ ದೆಹಲಿಗೆ ಬನ್ನಿ ಎಂದು ಹೇಳಿದ್ದಾರೆ. ಪ್ರಧಾನಿ ಕರೆ ಮಾಡಿದ್ದನ್ನು ಸ್ವತಃ ಮುಖ್ಯಮಂತ್ರಿಯವರೇ ಪ್ರವಾಸಕ್ಕೆ ತೆರಳುವುದಕ್ಕೂ ಮುನ್ನ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ್ದಲ್ಲದೆ, ಸಾಧ್ಯವಾದರೆ ನಾಳೆಯೇ ದೆಹಲಿಗೆ ಹೋಗುತ್ತೇನೆ.

ಪ್ರಧಾನಿಯವರು ಎಂದು ಸಮಯ ನೀಡುತ್ತಾರೋ ಅದರ ಮೇಲೆ ನನ್ನ ಪ್ರವಾಸ ನಿರ್ಧಾರವಾಗುತ್ತದೆ ಎಂದು ಹೇಳಿದರು.

ದೆಹಲಿ ಭೇಟಿ (2ನೇ ಪುಟಕ್ಕೆ)

## ಪ್ರಯಾಣಿಕರ ಸುಖಕರ ಪ್ರಯಾಣಕ್ಕೆ 'ಸದಾ ನಿಮ್ಮ ಸೇವೆಯಲ್ಲಿ' ರೈಲ್ವೆ ಪೊಲೀಸ್

ದಾವಣಗೆರೆ, ಜು.29- ರೈಲ್ವೇ ಪ್ರಯಾಣಿಕರ ಸುಖಕರ ಮತ್ತು ಸುರಕ್ಷಿತ ಪ್ರಯಾಣಕ್ಕೆ ರೈಲ್ವೆ ಪೊಲೀಸ್ ಸನ್ನದ್ಧವಾಗಿದ್ದು, ಪ್ರಯಾಣದ ವೇಳೆ ಸಂಕಷ್ಟಗಳು, ಅಸುರಕ್ಷತೆಯ ವಾತಾವರಣ ಎದುರಾದರೆ ಕೆಲವೇ ನಿಮಿಷಗಳಲ್ಲಿ ಪ್ರಯಾಣಿಕರ ರಕ್ಷಣೆಗೆ ಮತ್ತು ನೆರವಿಗೆ ಧಾವಿಸಲಿದೆ.

'ಸದಾ ನಿಮ್ಮ ಸೇವೆಯಲ್ಲಿ' ಎಂಬ ವಿನೂತನ ಕಾರ್ಯವು ನಗರದ ರೈಲ್ವೇ ನಿಲ್ದಾಣದಲ್ಲಿ ಇಂದಿನಿಂದ ಶುಭಾರಂಭಗೊಂಡಿದೆ.

ಇಲಾಖೆಯ ಎಡಿಜಿಪಿ ಭಾಸ್ಕರ್ ರಾವ್ ಅವರ ಆದೇಶದ ಮೇರೆಗೆ ರೈಲ್ವೆ ಪೊಲೀಸ್ ಅಧೀಕ್ಷಕರಾದ ಶ್ರೀಮತಿ ಸಿರಿಗೌರಿ ಹಾಗೂ ರೈಲ್ವೆ (2ನೇ ಪುಟಕ್ಕೆ)

## ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ರೈತರ ಮೊಗದಲ್ಲಿ ಮಂದಹಾಸ : ಪವಿತ್ರ ರಾಮಯ್ಯ



ಭದ್ರೆಯು ತನ್ನ ಗತ ವೈಭವವನ್ನು ಮರಳಿ ಪಡೆದಿರುವ ಕಾರಣ ಅಚ್ಚುಕಟ್ಟು ರೈತರ ಮೊಗದಲ್ಲಿ ಮಂದಹಾಸ ಮೂಡಿದೆ ಎಂದು ಕಾಡಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಹೇಳಿದ್ದಾರೆ.

ದಾವಣಗೆರೆ, ಜು.29- ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ಲಕ್ಷಾಂತರ ಹೆಕ್ಟೇರ್ ಪ್ರದೇಶಗಳ ಅನ್ನದಾತರ ಹಾಗೂ ಜನಸಾಮಾನ್ಯರ ಜೀವನಾಡಿಯಾದ ಭದ್ರಾ ಜಲಾಶಯದ ಜಲಾನಯನ ಪ್ರದೇಶದಲ್ಲಿ ಕಳೆದ ಒಂದು ವಾರದಿಂದ ಅತಿ ಹೆಚ್ಚಿನ ವರ್ಷಧಾರೆಯ ಕಾರಣ

ಭದ್ರಾ ಜಲಾಶಯಕ್ಕೆ ಬುಧವಾರ ಭೇಟಿ ನೀಡಿ ಮಾತನಾಡಿದ ಅವರು, ಕಳೆದ 15 ದಿನಗಳ ಹಿಂದೆ ಎಡ ಮತ್ತು ಬಲ ನಾಲೆಗಳಿಗೆ ನೀರು ಹರಿಸುವ ಸಂಬಂಧ ನಡೆಸಿದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ವ್ಯಕ್ತಪಡಿಸಿದ್ದ ನೀರು ಕೊರತೆಯ (3ನೇ ಪುಟಕ್ಕೆ)

## ಕುಂದುವಾಡ ಕೆರೆ ಕಾಮಗಾರಿ ವೀಕ್ಷಣೆಗೆ ಮೇಯರ್ ವೀರೇಶ್ ತಂಡ ಭೇಟಿ



**ಕಾಮಗಾರಿ ವೇಗ ಹೆಚ್ಚಿಸಲು ಎಸ್.ಟಿ. ವೀರೇಶ್ ಸೂಚನೆ**

ದಾವಣಗೆರೆ, ಜು.29- ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ನೇತೃತ್ವದಲ್ಲಿ ಜೀವ ವೈವಿಧ್ಯ ಸಲಹಾ ಮಂಡಳಿಯ ತಂಡ, ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಅಧಿಕಾರಿಗಳ ತಂಡವು ಗುರುವಾರ ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತು.

ಜೀವ ವೈವಿಧ್ಯ ಸಲಹಾ ಮಂಡಳಿ ಸಭೆಯಲ್ಲಿ ತೀರ್ಮಾನಿಸಿದಂತೆ ಇಂದು ಮಂಡಳಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಕಾಮಗಾರಿ ವೀಕ್ಷಣೆಗೆ ಆಗಮಿಸಿದ್ದಾಗಿ ಮಂಡಳಿಯ ಸದಸ್ಯರೂ ಆಗಿರುವ ಮೇಯರ್ ಎಸ್.ಟಿ. ವೀರೇಶ್ ಪತ್ರಿಕೆಗೆ ತಿಳಿಸಿದರು.

ಕುಂದುವಾಡ ಕೆರೆ ಅಭಿವೃದ್ಧಿ ಕಾಮಗಾರಿಗೆ ನ್ಯಾಯಾಲಯದ ತಡೆಯಾಜ್ಞೆ ತೆರವಾಗಿದ್ದು, ಕಾಮಗಾರಿ ಆರಂಭವಾಗಿದೆ.


ಮುಂದಿನ ದಿನಗಳಲ್ಲಿ ನಗರಕ್ಕೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕಾಮಗಾರಿ ವೇಗವನ್ನು ಹೆಚ್ಚಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ಹೇಳಿದರು.

ಅಭಿವೃದ್ಧಿ ಕಾಮಗಾರಿ ವೇಳೆ ಜೀವ ವೈವಿಧ್ಯ ಸಲಹಾ ಮಂಡಳಿ ಸದಸ್ಯರ ಸಲಹೆ ಪಡೆಯಬೇಕಿದ್ದು, ಸಾಧ್ಯವಾದಷ್ಟೂ ಕೆರೆಯ ಬಂಡ್ ಚಿಕ್ಕದು ಮಾಡುವಂತೆ, ಸಿಮೆಂಟೀಕರಣ ಹೆಚ್ಚು ಮಾಡದದಂತೆ, ಜೀವ ವೈವಿಧ್ಯತೆಗೆ ಧಕ್ಕೆ ಬಾರದಂತೆ ಸಲಹೆಗಳನ್ನು ನೀಡಲಾಗಿದೆ ಎಂದು ಮಂಡಳಿ ಸದಸ್ಯ ಗಿರೀಶ್ ದೇವರಮನಿ ಹೇಳಿದರು.

ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಜೀವ ವೈವಿಧ್ಯ ಸಲಹಾ ಮಂಡಳಿ ಸದಸ್ಯರುಗಳಾದ ಗುರುಸಿದ್ದಸ್ವಾಮಿ, ಹೆಚ್.ಸಿ. ಜಯಮ್ಮ, ರಘು ದೊಡ್ಮನಿ, ರೋಹಿಣಿ ಸೇರಿದಂತೆ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಇಂಜಿನಿಯರ್‌ಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕೊರೊನಾ ಹರಡುವ ವೇಗ ಹೆಚ್ಚಳ

### ಕೇರಳ ಹಾಗೂ ಈಶಾನ್ಯದ ರಾಜ್ಯಗಳಲ್ಲಿನ ಹೆಚ್ಚಳಕ್ಕೆ ಕಳವಳ



ನವದೆಹಲಿ, ಜು. 29 – ಕೊರೊನಾ ಹರಡುವ ವೇಗವನ್ನು ಸೂಚಿಸುವ ಆರ್ - ಮೌಲ್ಯ ದೇಶಾದ್ಯಂತ ಹೆಚ್ಚಾಗುತ್ತಿದೆ. ಕೇರಳ ಹಾಗೂ ಈಶಾನ್ಯದ ರಾಜ್ಯಗಳಲ್ಲಿ ಕೊರೊನಾ ವೇಗವಾಗಿ ಹರಡುತ್ತಿರುವುದು ಮತ್ತೆ ಕೊರೊನಾ ಹೆಚ್ಚಾಗುವ ಕಳವಳ ತಂದಿದೆ.

ಪುಣೆ ಹಾಗೂ ದೆಹಲಿಗಳಲ್ಲಿ ಕೊರೊನಾ ಹರಡುವ ಆರ್ - ಮೌಲ್ಯ ಒಂದಕ್ಕೆ ಹತ್ತಿರವಾಗಿದೆ ಎಂದು ಚೆನ್ನೈನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸಸ್ ಸಂಶೋಧಕರ ವಿಶ್ಲೇಷಣೆ ತಿಳಿಸಿದೆ.

ಎರಡನೇ ಕೊರೊನಾ ಮಾರ್ಚ್ 9ರಿಂದ ಏಪ್ರಿಲ್ 21ರ ನಡುವೆ ಅಲೆ ಅತಿ ಹೆಚ್ಚಿನ ಮಟ್ಟದಲ್ಲಿದ್ದಾಗ ಆರ್ - ಮೌಲ್ಯ 1.37 ಆಗಿತ್ತು. ಏಪ್ರಿಲ್ 24ರ ನಂತರ ಇಳಿಮುಖವಾಗಿತ್ತು. ಜೂನ್ 26ಕ್ಕೆ ಆರ್ - ಮೌಲ್ಯ 0.88 ಆಗಿತ್ತು.

ಇಡೀ ಭಾರತದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಳಿತ ಕಾಣುತ್ತಿದೆ. ಆದರೆ, ಆರ್ - ಮೌಲ್ಯ 1ರ ಹತ್ತಿರಕ್ಕೆ ಬರುತ್ತಿದೆ. ಮುಂದಿನ ಕೆಲ ದಿನಗಳಲ್ಲಿ ಇದು ಇನ್ನಷ್ಟು (2ನೇ ಪುಟಕ್ಕೆ)

## ಡಿಪ್ಲೋಮಾ ಪರೀಕ್ಷೆ ರದ್ಧತಿಗೆ ಆಗ್ರಹ

### ಹರಪನಹಳ್ಳಿಯಲ್ಲಿ ಎನ್‌ಎಸ್‌ಯುಐ ಪ್ರತಿಭಟನೆ

ಹರಪನಹಳ್ಳಿ, ಜು.29- ಡಿಪ್ಲೋಮಾ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಒಂದೇ ಸೆಮಿಸ್ಟರ್ ಪರೀಕ್ಷೆ ಆಯೋಜಿಸಿದಂತೆ ಅಂತಿಮ ವರ್ಷದ ವಿದ್ಯಾರ್ಥಿಗಳ ಮೂರು ಹಂತದ ಪರೀಕ್ಷೆಗಳನ್ನು ರದ್ದುಪಡಿಸಿ, ಒಂದೇ ಸೆಮಿಸ್ಟರ್ ಪರೀಕ್ಷೆ ನಡೆಸಬೇಕೆಂದು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಕಾಂಗ್ರೆಸ್ (ಎನ್.ಎಸ್.ಯು.ಐ) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಎನ್‌ಎಸ್‌ಯುಐ ನೇತೃತ್ವದಲ್ಲಿ ಪಟ್ಟಣದ ಐಬಿ ವೃತ್ತದಿಂದ ಮಿನಿ ವಿಧಾನಸೌಧಕ್ಕೆ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿದ ವಿದ್ಯಾರ್ಥಿಗಳು, ತಹಶೀಲ್ದಾರ್ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಂಘಟನೆಯ ತಾಲ್ಲೂಕು ಉಪಾಧ್ಯಕ್ಷ ಡಂಕಿ ವಾಸಿಂ ಮಾತನಾಡಿ, ಇಡೀ ರಾಜ್ಯಾದ್ಯಂತ ಕಳೆದ ಒಂದು ತಿಂಗಳಿಂದ ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ನಡೆಸಿದ ಹೋರಾಟವನ್ನು ಗಮನದಲ್ಲಿರಿಸಿಕೊಂಡು ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಒಂದೇ ಸೆಮಿಸ್ಟರ್ ಪರೀಕ್ಷೆ ನಡೆಸಲು ರಾಜ್ಯ ಸರ್ಕಾರ ಆದೇಶಿಸಿದೆ. ಇದೇ ಮಾನದಂಡವನ್ನು ಅಂತಿಮ ವರ್ಷದ ವಿದ್ಯಾರ್ಥಿಗಳಿಗೂ ಅನ್ವಯ ಮಾಡಬೇಕು. ಇಲ್ಲವಾದಲ್ಲಿ ಪರೀಕ್ಷಾ ಬಹಿಷ್ಕಾರಕ್ಕೆ ನಾವೆಲ್ಲ ಸಜ್ಜಾಗಲಿದ್ದೇವೆ ಎಂದರು.

ಅಂತಿಮ ವರ್ಷದ ವಿದ್ಯಾರ್ಥಿಗಳು ಅಕ್ಟೋಬರ್ ತಿಂಗಳಿನಲ್ಲಿ ಮೂರು ಪರೀಕ್ಷೆಗಳನ್ನು (2ನೇ ಪುಟಕ್ಕೆ)

## ಲಸಿಕೆಗಳ ಬೆರೆಸುವ ಪ್ರಯೋಗಕ್ಕೆ ಒಪ್ಪಿಗೆ

ನವದೆಹಲಿ, ಜು. 29 – ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಗಳನ್ನು ಸೇರಿಸಿ ನೀಡುವ ಪ್ರಯೋಗ ಕೈಗೊಳ್ಳಲು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜ್‌ಗೆ ಕೇಂದ್ರ ಔಷಧ ಪ್ರಾಧಿಕಾರದ ಪರಿಣಿತರ ಸಮಿತಿ ಅನುಮತಿ ನೀಡಿದೆ.

ಭಾರತ್ ಬಯೋಟೆಕ್ ಈ ಕುರಿತು ಅಧ್ಯಯನ ನಡೆಸಲು ಅನುಮತಿ ನೀಡಲಾಗಿದೆ. ನಾಲ್ಕು ಹಂತಗಳಲ್ಲಿ 300 ಆರೋಗ್ಯ ಸ್ವಯಂ ಸೇವಕರು ಈ ಪ್ರಯೋಗಗಳಲ್ಲಿ ಭಾಗಿಯಾಗಲಿದ್ದಾರೆ.

ಒಬ್ಬ ವ್ಯಕ್ತಿಗೆ ಬೇರೆ ಬೇರೆ ಲಸಿಕೆ ನೀಡಬಹುದೇ ಎಂಬ ಬಗ್ಗೆ ಅಧ್ಯಯನ ನಡೆಸಲಾಗುವುದು.


**ತೃತೀಯ ವರ್ಷದ ಪುಣ್ಯಸ್ಮರಣೆ**



**ದಿ|| ಕೆ. ಶಿವರುದ್ರಪ್ಪ**

ನೀವು ನಮ್ಮನ್ನಗಲಿ ಮೂರು ವರ್ಷಗಳಾದವು
ಸದಾ ನಿಮ್ಮ ಸವಿನೆನಪು, ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಕೆ. ರುದ್ರಮ್ಮ
ಮಕ್ಕಳು : ಆನಂದ, ಭದ್ರಚಾರಿ, ಸುಧಾ
ಸೊಸೆಯಂದಿರು : ಸ್ಮಿತಾ, ಕವಿತ ಅಳಿಯ : ಆಂಜನೇಯಚಾರಿ
ಮೊಮ್ಮಕ್ಕಳು : ಅನುಷಾ, ಪುಷ್ಪಾ, ಖುಷಿ, ಶುಭ, ಲಿಖಿತ, ಮಹಾಲಕ್ಷ್ಮಿ, ನಾಗರಾಜ
ಶಿರಮಗೊಂಡನಹಳ್ಳಿ, ದಾವಣಗೆರೆ.

# ಖಾಸಗೀಕರಣ ಖಂಡಿಸಿ ಎಲ್ಐಸಿ ನೌಕರರ ಸಂಘದ ಪ್ರತಿಭಟನೆ



ದಾವಣಗೆರೆ, ಜು.29- ಕೇಂದ್ರ ಸರ್ಕಾರವು ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣ ಮಾಡಲು ನಿಂತಿದ್ದು, ದೇಶ ಜನರನ್ನು ಸಂಕಷ್ಟಕ್ಕೆ ಸಿಲುಕಿಸುತ್ತಿರುವ ಕ್ರಮಕ್ಕೆ ಎಲ್ಐಸಿ ನೌಕರರ ಸಂಘ ಮತ್ತು ಎಲ್ಐಸಿ ಏಜೆಂಟ್ಸ್ ಯೂನಿಯನ್ ಸದಸ್ಯರು ವಿರೋಧ ವ್ಯಕ್ತಪಡಿಸಿ, ಎಲ್ಐಸಿ ಕಚೇರಿ ಮುಂದೆ ನಿನ್ನೆ ಪ್ರತಿಭಟನೆ ನಡೆಸಿದರು.

ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜು ಮಾತನಾಡಿ, ದೇಶಭಕ್ತಿ ಹೆಸರೇಳುವ ಸರ್ಕಾರ, ರಕ್ಷಣಾ ಇಲಾಖೆ ಅಡಿಯಲ್ಲಿ ದೇಶದ ರಕ್ಷಣೆಗೆ ರಕ್ಷಣಾ ಸಾಮಗ್ರಿ ಮತ್ತು ಶಸ್ತ್ರಾಸ್ತ್ರಗಳನ್ನು ಉತ್ಪಾದನೆ ಮಾಡುತ್ತಿರುವ 44 ಡಿಆರ್‌ಡಿಒ ಕಂಪನಿಗಳನ್ನು ಖಾಸಗಿ ಯವರಿಗೆ ಮಾರಾಟ ಮಾಡಲು ಅಗತ್ಯ ಸೇವೆಗಳ ಸುಗ್ರೀವಾಜ್ಞೆ ಹೊರಡಿಸಿದೆ.

ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿದಿದ್ದರೂ ಪೆಟ್ರೋಲ್-ಡೀಸೆಲ್ ಬೆಲೆಗಳು ಏರುತ್ತಿದೆ. ಎಲ್‌ಪಿಜಿ ಮೇಲಿನ ಸಬ್ಸಿಡಿ ತೆಗೆದು ಜನ ಸಾಮಾನ್ಯರ ಗಾಯದ ಮೇಲೆ ಬರೆ ಎಳೆಯಲಾಗಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದರು.

ಎಲ್ಐಸಿ ನೌಕರರ ಸಂಘದ ಪುಟ್ಟರಾಜು, ಅನಿತಾ, ತಿಪ್ಪೇಸ್ವಾಮಿ, ದತ್ತರಾಜ್ ಹಾಗೂ ಎಲ್ಐಸಿ ಏಜೆಂಟರ ಸಂಘದ ಬಿ.ಟಿ. ಶಿವಮೂರ್ತಿ, ಎಂ.ಎಂ. ಮಹಾದೇವಪ್ಪ, ಎಸ್.ಎ. ಕಲ್ಲನಗೌಡರ್ ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಬೋಗಸ್ ಕಾರ್ಡ್‌ವುಳ್ಳವರಿಗೆ ಪರಿಹಾರಕ್ಕೆ ಖಂಡನೆ

## ಕಾರ್ಮಿಕ ಇಲಾಖೆ ವಿರುದ್ಧ ಪ್ರತಿಭಟನೆ



ದಾವಣಗೆರೆ, ಜು.29- ಬೋಗಸ್ ಕಾರ್ಡ್ ವಿತರಣೆ ವಿರುದ್ಧ ಹಾಗೂ ಕಟ್ಟಡ ಕಾರ್ಮಿಕರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರೂ ಸ್ಪಂದಿಸದ ಕಾರಣ ಕಾರ್ಮಿಕ ಇಲಾಖೆ ವಿರುದ್ಧ ನಗರದಲ್ಲಿಂದು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಸಂಘಗಳ ಸಮನ್ವಯ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ದೇವರಾಜು ಅರಸು ಬಡಾವಣೆಯಲ್ಲಿನ ಜಿಲ್ಲಾ ಕಾರ್ಮಿಕ ಇಲಾಖೆಗೆ ಮುತ್ತಿಗೆ ಹಾಕಿದ ಸಮಿತಿಯ ಪದಾಧಿಕಾರಿಗಳು, ಕಾರ್ಮಿಕರ ನೋಂದಣಿ ನೈಜತೆ ಕಾಪಾಡಲು ಸಂಘಟನೆಗಳ ದೃಢೀಕರಣ ಪತ್ರಕ್ಕೆ ಮಾನ್ಯತೆ ನೀಡಬೇಕು. ಅಲ್ಲದೇ ಕಾರ್ಮಿಕರ ಸಮಸ್ಯೆ ಬಗ್ಗೆ ಚರ್ಚಿಸಲು ಸಮನ್ವಯ ಸಮಿತಿಯನ್ನು ಇಲಾಖೆ ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಆಗ್ರಹಿಸಿದರು.

ಇದೇ ವೇಳೆ ಮಾತನಾಡಿದ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಪಿ.ಕೆ. ಲಿಂಗರಾಜ್, ಕಟ್ಟಡ ಕಾರ್ಮಿಕರ ಭದ್ರತೆಗೆ ಯಾವ ಸೌಲಭ್ಯಗಳೂ ಇಲ್ಲ. ಯಾವುದೇ ಸರ್ಕಾರದ ಹಣ ತೆಗೆದುಕೊಳ್ಳದೇ ಕಲ್ಯಾಣ ಮಂಡಳಿ ನಿರ್ಮಿಸಿ ನಮ್ಮಿಂದಲೇ ಪಡೆಯಲಾದ ಹಣದಿಂದ 10 ಸಾವಿರ ಕೋಟಿ ಇದೆ. ಇದು ಯಾವುದೇ ರಾಜಕಾರಣಿಗಳು, ಅಧಿಕಾರಿಗಳ ಹಣವಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕರದ್ದೇ ಹಣವನ್ನು ಇಲಾಖೆ ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ. ಅಲ್ಲದೇ ಕೋವಿಡ್ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರು ಬೀದಿಗೆ ಬಿದ್ದಿದ್ದರೂ ಸಹ ಕಲ್ಯಾಣ ಮಂಡಳಿಯಿಂದ ಅರ್ಹ ಕಾರ್ಮಿಕರಿಗೆ ಯಾವುದೇ ಪರಿಹಾರ ದೊರಕಲಿಲ್ಲ. ಕೇವಲ ಬೋಗಸ್ ಕಾರ್ಡ್‌ಗಳನ್ನು ಹೊಂದಿರುವ ಜನರಿಗೆ ಪರಿಹಾರ, ಆಹಾರದ ಕಿಟ್‌ಗಳನ್ನು ನೀಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಮಿಕ ಇಲಾಖೆ ನೀಡಿದ ಮಾಹಿತಿಯಂತೆ ರಾಜ್ಯದಲ್ಲಿ 24 ಲಕ್ಷ ಕಾರ್ಮಿಕರು ಇದ್ದಾರೆ ಎಂದು ಹೇಳಿದೆ. ಆದರೆ, ಸಂಘಟನೆಗಳು ಸಮೀಕ್ಷೆ ಮಾಡಿದ ಪ್ರಕಾರ ಇಡೀ ರಾಜ್ಯದಲ್ಲಿ 17ರಿಂದ 18 ಲಕ್ಷ ಕಟ್ಟಡ ಕಾರ್ಮಿಕರಿದ್ದು, ಇಷ್ಟೊಂದು ಸಂಖ್ಯೆಯಲ್ಲಿ ಕಾರ್ಮಿಕರು ಎಲ್ಲಿಂದ ಸೇರ್ಪಡೆಗೊಂಡರು. ಬೋಗಸ್ ಕಾರ್ಡ್‌ಗಳು ಎಷ್ಟು ಎನ್ನುವುದನ್ನು ಇಲಾಖೆ ಬಹಿರಂಗ ಪಡಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ವಿ. ಲಕ್ಷ್ಮಣ್, ಶಿವಕುಮಾರ್ ಡಿ.ಶೆಟ್ಟರ್ ಹಾಗೂ ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘದ ಸತೀಶ್ ಅರವಿಂದ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಮಂಜುನಾಥ್ ಕುಕ್ಕುವಾಡ, ಬಿ. ದುಗ್ಗಪ್ಪ, ಆದಿಲ್‌ಖಾನ್, ದಾದಾಪೀರ್, ಯರಗುಂಟೆ ಸುರೇಶ್, ಹೆಚ್‌ಕೆಆರ್ ಸುರೇಶ್, ಎಸ್. ಮುರುಗೇಶ್, ಭೀಮಾರೆಡ್ಡಿ ಮುಂತಾದ ಕಾರ್ಮಿಕರು ಭಾಗವಹಿಸಿದ್ದರು.

# ಗಂಡನ ಹತ್ಯೆಗೈದಿದ್ದ ಹೆಂಡತಿ, ಪ್ರಿಯಕರ ಬಂಧನ





ದಾವಣಗೆರೆ, ಜು.29- ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಗಂಡನನ್ನು ಹೆಂಡತಿಯು ತನ್ನ ಪ್ರಿಯಕರನ ಜೊತೆ ಸೇರಿ ಕೊಲೆ ಮಾಡಿದ ಘಟನೆ ನಡೆದಿದೆ.

ಚನ್ನಗಿರಿ ತಾಲ್ಲೂಕು ವಿ. ಬನ್ನಿಹಟ್ಟಿ ಗ್ರಾಮದ ಲೋಕೇಶ್ (38) ಕೊಲೆಯಾದ ವ್ಯಕ್ತಿ. ಕುಸುಮಾ ಮತ್ತು ಮೃತ ಲೋಕೇಶ್ ಗೆ ಕಳೆದ 11 ವರ್ಷಗಳ ಹಿಂದೆ ಮದುವೆಯಾಗಿತ್ತು.

ಕಳೆದ 2 ವರ್ಷಗಳ ಹಿಂದೆ ಕುಸುಮಾಗೆ ಪ್ರಭು ಎಂಬ ವ್ಯಕ್ತಿ ಪರಿಚಯವಾಗಿದ್ದು, ಇಬ್ಬರ ಪರಿಚಯ ಅನೈತಿಕ ಸಂಬಂಧಕ್ಕೆ ತಿರುಗಿತ್ತು. ಈ ವಿಷಯ ಗಂಡನಿಗೆ ತಿಳಿಯುತ್ತದೆ ಮತ್ತು ಇಬ್ಬರ ಅನೈತಿಕ ಸಂಬಂಧಕ್ಕೆ ಗಂಡ ಅಡ್ಡಿಯಾಗಬಹುದು ಎಂದು ಕೊಲೆ ಸಂಚು ರೂಪಿಸಿದ್ದರು.

ಬುಧವಾರ ರಾತ್ರಿ ಕುಸುಮಾ ಮತ್ತು ಪ್ರಿಯಕರ ಪ್ರಭು ಸೇರಿ ಮಲಗಿದ್ದ ಗಂಡ ಲೋಕೇಶ್‌ನಿಗೆ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿ ನಂತರ ಇದು ಆತ್ಮಹತ್ಯೆ ಎಂದು ಬಿಂಬಿಸುವ ಪ್ರಯತ್ನ ಮಾಡಿದ್ದರು. ಆದರೆ, ಬೆಳಿಗ್ಗೆ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿ, ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ.

ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇದೀಗ ಹೆಂಡತಿ ಕುಸುಮಾ ಮತ್ತು ಪ್ರಿಯಕರ ಪ್ರಭು ಪೊಲೀಸರ ಅತಿಥಿಯಾಗಿದ್ದಾರೆ.

# ರೈತರ ಮೊಗದಲ್ಲಿ ಮಂದಹಾಸ

**(1ನೇ ಪುಟದಿಂದ)** ಆತಂಕ ದೂರವಾಗಿದ್ದು, ಈ ಬಾರಿ ಒಂದು ತಿಂಗಳ ಮುಂಚೆಯೇ ಜಲಾಶಯ ತುಂಬಿದೆ. ಪ್ರತಿ ಬಾರಿ ಜಲಾಶಯ ಆಗಸ್ಟ್ ತಿಂಗಳಲ್ಲಿ ಭರ್ತಿಯಾಗುವುದು ವಾಡಿಕೆ. ಆದರೆ ಈ ವರ್ಷ ಒಂದು ತಿಂಗಳ ಮುಂಚೆ ಜಲಾಶಯ ತುಂಬಿರುವುದು ವಿಶೇಷ ದಾಖಲೆ ಎಂದರು.

ಈ ಬಾರಿಯು ಬೇಸಿಗೆ ಬೆಳೆಗೆ ನೀರು ಲಭ್ಯವಾಗುವುದರಲ್ಲಿ ಅನುಮಾನವಿಲ್ಲ. ಕಳೆದ ಬಾರಿ ಅಚ್ಚುಕಟ್ಟು ಕೊನೆಯ ಭಾಗಕ್ಕೆ ನೀರು ಹರಿಸಿದಂತೆ ಮುಂಗಾರು ಬೆಳೆಗಳಿಗೆ ಕೂಡ ನೀರು ಹರಿಸುತ್ತೇವೆ. ನಾನು ಅಧಿಕಾರದಲ್ಲಿ ಇರುವವರೆಗೆ ರೈತರಿಗೆ ನೀರಿನ ವಿಚಾರದಲ್ಲಿ ತೊಂದರೆ ಆಗಲು ಬಿಡುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ನಿರ್ದೇಶಕ ವಿನಾಯಕ್, ಅಧೀಕ್ಷಕ ಅಭಿಯಂತರ ಚಂದ್ರಹಾಸ, ಕಾರ್ಯಪಾಲಕ ಅಭಿಯಂತರ ರವಿಚಂದ್ರ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರ ವೆಂಕಟೇಶ್ ಉಪಸ್ಥಿತರಿದ್ದರು.

# 20 ಕೆರೆಗಳ ಬ್ಯಾರೇಜ್ ಕಾಮಗಾರಿಯ ಕಾರ್ಮಿಕರಿಗೆ ಸೊಳ್ಳೆ ಪರದೆ ವಿತರಣೆ



ಮಲೇಬೆನ್ನೂರು, ಜು.29- ರಾಜನಹಳ್ಳಿ ಬಳಿ ನಡೆಯುತ್ತಿರುವ 20 ಕೆರೆಗಳಿಗೆ ನೀರು ಪೂರೈಸುವ ಏತ ನೀರಾವರಿ ಬ್ಯಾರೇಜ್ ನಿರ್ಮಾಣದ ಕೆಲಸಕ್ಕಾಗಿ ವಿವಿಧ ರಾಜ್ಯಗಳಿಂದ ಆಗಮಿಸಿರುವ ಕೂಲಿ ಕಾರ್ಮಿಕರಿಗೆ ಆನೆ ಕಾಲು ರೋಗ ಮತ್ತು ಮಲೇರಿಯಾ ಬಗ್ಗೆ ಜಾಗೃತಿ ಮೂಡಿಸಿ. ರಕ್ತ ಪರೀಕ್ಷೆ ಮಾಡಲಾಯಿತು.

ಆರೋಗ್ಯ ಇಲಾಖೆಯಿಂದ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮೇಲ್ವಿಚಾರಕರಾದ ವಿಜಯ ಕುಮಾರ್ ಗಟ್ಟಿ, ಎಂ.ವಿ. ಹೊರಕೇರಿ, ಹರಿಹರ ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಆರೋಗ್ಯ ಸಿಬ್ಬಂದಿಗಳಾದ ದಾದಾಪೀರ್, ಆದರ್ಶ್, ನೀಲಪ್ಪ ದೇವರಾಜ್ ಮತ್ತಿತರರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಕಂಪನಿಯ ಬಾಬು ಪೂಜಾರಿ ಅವರು ಆರೋಗ್ಯ ಇಲಾಖೆಯ ಸೂಚನೆ ಮೇರೆಗೆ ಸೊಳ್ಳೆ ಪರದೆಗಳನ್ನು ಉಚಿತವಾಗಿ ವಿತರಿಸಿದರು.

# ಹೆಸರಿನಂತೆ ಬಸವಣ್ಣನವರ ಆಡಳಿತ ನೀಡಿ : ಆನಂದರಾಜ್



ದಾವಣಗೆರೆ, ಜು. 29- ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಹೆಸರಿನಂತೆ ಹನ್ನೆರಡನೇ ಶತಮಾನದ ಬಸವಣ್ಣನವರ ಮಾದರಿ ಆಡಳಿತ ನೀಡುವಂತಾಗಲಿ ಎಂದು ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಅಧ್ಯಕ್ಷ ಬಾಡದ ಆನಂದರಾಜ್ ಅವರು ಆಶಿಸಿದ್ದಾರೆ.

ಬಸವಣ್ಣ ಮತ್ತು ಕನಕದಾಸರ ನಾಡಿನಲ್ಲಿ ಹುಟ್ಟಿ ಬೆಳೆದು ಮುಖ್ಯಮಂತ್ರಿಯಾಗಿರುವ ಬಸವರಾಜ ಬೊಮ್ಮಾಯಿಯವರು, ಶೋಷಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ನೀಡಬೇಕು. ಬಿ.ಎಸ್.ಯಡಿಯೂರಪ್ಪ ಅವರ ಸಚಿವ ಸಂಪುಟದಲ್ಲಿದ್ದವರನ್ನು ಕೈ ಬಿಟ್ಟು ಇನ್ನುಳಿದ ತುಳಿತಕ್ಕೆ ಒಳಗಾದ ಸಮುದಾಯದವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಂಡು ಜನಪರ ಆಡಳಿತ ನೀಡಲೆಂದು ಆನಂದರಾಜ್ ಅವರು ಸಲಹೆ ನೀಡಿದ್ದಾರೆ. ದಾವಣಗೆರೆ ಜಿಲ್ಲೆಯವರೊಬ್ಬರಿಗೆ ಮಂತ್ರಿ ಸ್ಥಾನ ನೀಡುವಂತೆಯೂ ಅವರು ಒತ್ತಾಯಿದ್ದಾರೆ.

# ನಾಡಿದ್ದು ಗಾಯತ್ರಿ ಪರಿವಾರದ ಸಭೆ

ದಾವಣಗೆರೆ, ಜು.29- ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದ ಸರ್ವ ಸದಸ್ಯರ ಮಹಾಸಭೆಯು ಆಗಸ್ಟ್ 1 ರಂದು ಸಂಜೆ 5 ಗಂಟೆಗೆ ಸಂಸ್ಥೆಯ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ. ಪರಿವಾರದ ಅಧ್ಯಕ್ಷರಾದ ಡಾ. ಸುಶೀಲಮ್ಮ ಅಧ್ಯಕ್ಷತೆ ವಹಿಸಲಿದ್ದು, ಗೌರವಾಧ್ಯಕ್ಷ ಕೆ.ಹೆಚ್. ಮಂಜುನಾಥ್ ಉಪಸ್ಥಿತರಿರುವರು.

# ಪತ್ರಿಕಾ ವಿತರಕರಿಗೆ ದಿನಸಿ ಕಿಟ್ ವಿತರಣೆ




ದಾವಣಗೆರೆ, ಜು. 29- ಕೋವಿಡ್ ಸಂದರ್ಭದಲ್ಲಿ ಸಂಕಷ್ಟದಲ್ಲಿರುವವರನ್ನು ಗುರುತಿಸಿ, ಅಂತಹವರಿಗೆ ದಿನಸಿ ಕಿಟ್ ವಿತರಿಸುತ್ತಿರುವ ಶಿಂಷಾ ಫೌಂಡೇಷನ್‌ನ ಸಮಾಜಮುಖಿ ಕಾರ್ಯ ಶ್ಲಾಘನೀಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಗುಂಡಾಲ್ ಬಿಜಿನೆಸ್ ಸಲ್ಯೂಷನ್ ಕೇಂದ್ರದಲ್ಲಿ ಶಿಂಷಾ ಫೌಂಡೇಷನ್‌ನಿಂದ ಇಂದು ಆಯೋಜಿಸಿದ್ದ ಪತ್ರಿಕಾ ವಿತರಕರಿಗೆ ದಿನಸಿ ಕಿಟ್ ವಿತರಣೆ, ಅವಶ್ಯವಿರುವವರಿಗೆ ಟ್ಯಾಬ್ ವಿತರಿಸಿ ಅವರು ಮಾತನಾಡಿದರು.

ಶಿಂಷಾ ಫೌಂಡೇಷನ್ ಸಂಸ್ಥಾಪಕ ಮಂಜುನಾಥ ಗುಂಡಾಲ್ ಮಾತನಾಡಿ, ತಮ್ಮ ವ್ಯಾಪಾರದಿಂದ ಬರುವ ಹಣವನ್ನು ಸಮಾಜ ಸೇವೆಗೆ ಮೀಸಲಿಟ್ಟು, ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಷ ಇಬ್ಬರು ಮಕ್ಕಳಂತೆ ಇದುವರೆಗೂ 12 ಮಕ್ಕಳನ್ನು ದತ್ತು ಪಡೆದಿದ್ದು, ಅವರಿಗೆ 1 ರಿಂದ 10ನೇ ತರಗತಿವರೆಗೆ ಶಿಕ್ಷಣ ನೀಡುತ್ತಿದ್ದೇವೆ. ಅನಾಥಾಶ್ರಮ, ವೃದ್ಧಾಶ್ರಮ, ಪ್ರೇರಣಾ ಸಂಸ್ಥೆಯ ಮಕ್ಕಳಿಗೆ ಊಟ, ಫ್ಯಾನ್, ಸ್ಕೂಲ್ ಬ್ಯಾಗ್ ಸೇರಿದಂತೆ ಹಲವಾರು ಉಪಯೋಗಕಾರಿ ವಸ್ತುಗಳನ್ನು ನೀಡುತ್ತಿದ್ದೇವೆ. ಆಯ್ದ 5 ಶಾಲೆಗಳಿಗೆ 10 ಲ್ಯಾಪ್‌ಟಾಪ್, ಬಡವರಿಗೆ 5 ಆಕ್ಸಿಜನ್ ಕಾನ್ಸಂಟ್ರೇಟರ್, ಬಡ ಮಕ್ಕಳಿಗೆ 25 ಟ್ಯಾಬ್‌ಗಳನ್ನು ನೀಡಲಾಗಿದೆ ಎಂದು ವಿವರಿಸಿದರು.

# ಮಳೆಹಾನಿ : ಶಾಸಕರ ಪರಿಶೀಲನೆ



ಮಲೇಬೆನ್ನೂರು, ಜು.29- ಕಡಾರನಾಯ್ಕನಹಳ್ಳಿ ಗ್ರಾಮದಲ್ಲಿ ಮಳೆಯಿಂದಾಗಿ ಹಾನಿಗೊಳಗಾದ ಮನೆಗಳನ್ನು ಶಾಸಕ ಎಸ್. ರಾಮಪ್ಪ ವೀಕ್ಷಣೆ ಮಾಡಿ, ಪರಿಹಾರದ ಭರವಸೆ ನೀಡಿದರು.

ಮಳೆಯಿಂದ ತಾಲ್ಲೂಕಿನಲ್ಲಿ ಸುಮಾರು 30 ಕ್ಕೂ ಹೆಚ್ಚು ವಾಸದ ಮನೆಗಳಿಗೆ ಭಾಗಶಃ ಹಾನಿಯಾಗಿರುವ ಬಗ್ಗೆ ಮಾಹಿತಿ ಇದ್ದು, ಅವರಿಗೆ ತಕ್ಷಣ ಅಗತ್ಯ ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆಂದು ಶಾಸಕರು ತಿಳಿಸಿದರು.

ಗ್ರಾಮದ ಗುಬ್ಬಿ ರಂಗನಾಥ್, ಹನುಮಂತಪ್ಪ, ಚಂದ್ರಪ್ಪ, ದೇವರಾಜ್, ಪಿಡಿಓ ಪರಮೇಶ್ವರಪ್ಪ, ಗ್ರಾಮ ಲೆಕ್ಕಾಧಿಕಾರಿ ಆನಂದತೀರ್ಥ ಮತ್ತಿತರರು ಈ ವೇಳೆ ಹಾಜರಿದ್ದರು.

# ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಸತೀಶ್ ಸಂಯೋಜನಾಧಿಕಾರಿ



ದಾವಣಗೆರೆ, ಜು. 29 - ನಗರದ ದೃಶ್ಯಕಲಾ ಮಹಾವಿದ್ಯಾಲಯದ ಸಂಯೋಜನಾಧಿಕಾರಿಯಾಗಿ ಅದೇ ಮಹಾವಿದ್ಯಾಲಯದ ಪೇಂಟಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಸತೀಶ್ ಕುಮಾರ್ ಪಿ. ವಲ್ಲೇಪುರೆ ನೇಮಕಗೊಂಡಿದ್ದಾರೆ.

# ಹಂತಕರ ವಿರುದ್ಧ ಕಠಿಣ ಕ್ರಮಕ್ಕೆ ಉಮಾ ಪ್ರಕಾಶ ಒತ್ತಾಯ

ದಾವಣಗೆರೆ, ಜು. 29- ಭರಮಸಾಗರ ಹೋಬಳಿ ಇಸಾಮುದ್ರದ ಅಪ್ರಾಪ್ತೆಯ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವಂತೆ ಮಹಾನಗರ ಪಾಲಿಕೆ ಸಾಯಿ ಸಮಿತಿ ಅಧ್ಯಕ್ಷರಾದ ಡಿ.ಎಸ್. ಉಮಾ ಪ್ರಕಾಶ್ ಒತ್ತಾಯಿಸಿದ್ದಾರೆ.

ಮಹಿಳೆಯರು, ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ವಿಚಾರಣೆ ವಿಳಂಬವಾದರೆ ದುಷ್ಕರ್ಮಿಗಳು, ಅತ್ಯಾಚಾರಿಗಳು, ಹಂತಕರು ಜಾಮೀನು ಪಡೆದು, ಮತ್ತಷ್ಟು ಇಂತಹ ಕೃತ್ಯ ಎಸಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಸಾಮುದ್ರ ಗ್ರಾಮದ ಅಪ್ರಾಪ್ತೆಯ ಮೇಲೆ ಅತ್ಯಾಚಾರ ಎಸಗಿ, ಹತ್ಯೆಗೈದವರಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಭಗೀರಥ ಉಪ್ಪಾರ ಸಮಾಜದ ರಾಜ್ಯ ನಾಯಕರೂ ಆದ ಉಮಾ ಪ್ರಕಾಶ್ ಅವರು ಸರ್ಕಾರವನ್ನು ಆಗ್ರಹಿಸಿದ್ದಾರೆ.

# ಆನಗೋಡಿನಲ್ಲಿ ಇಂದಿನಿಂದ ನೇಕಾರ ಮಹಿಳಾ ಜಾಗೃತಿ ಶಿಬಿರ



ಆನಗೋಡಿನ ಶ್ರೀ ಬನಶಂಕರಿ ದೇವಸ್ಥಾನ ಟ್ರಸ್ಟ್, ಮುದೇನೂರ ಮಹಾಸಂಸ್ಥಾನ ಹಾಗೂ ರಾಜ್ಯ ನೇಕಾರ ಮಹಿಳಾ ವೇದಿಕೆ ಸಂಯುಕ್ತ ರಾಜ್ಯ ಮಟ್ಟದ ನೇಕಾರ ಮಹಿಳಾ ಜಾಗೃತಿ ಶಿಬಿರವು ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಇಂದಿನಿಂದ ಆಗಸ್ಟ್ 2 ರವರೆಗೆ 4 ದಿನ ನಡೆಯಲಿದೆ ಎಂದು ಮುದೇನೂರ ಸಂಸ್ಥಾನದ ಶ್ರೀ ಈಶ್ವರಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ ಉತ್ಥಾನ, ಯೋಗ, ಪ್ರಾರ್ಥನೆ, ಮಧ್ಯಾಹ್ನ ಉಪನ್ಯಾಸ, ಪ್ರಶ್ನೋತ್ತರ, ಅತಿಥಿಗಳ ಭಾಷಣ, ಸಂಜೆ ಆಟ, ಭಜನೆ, ಪ್ರವಚನ ನಡೆಯಲಿದೆ. 31 ರಂದು 4 ಕ್ಕೆ ಉದ್ಘಾಟನೆ, ಪರಿಚಯ ಉದ್ಘಾಟನಾ ಭಾಷಣ, 2 ರಂದು 12 ಕ್ಕೆ ಸಮಾರೋಪ ಕಾರ್ಯಕ್ರಮವಿದೆ. ಹೆಚ್ಚಿನ ಮಾಹಿತಿಗೆ 9845763534, ಡಿ.ಎನ್. ಗಿರೀಶ್, (7892388553), ಶೋಭಾ ಮುರಳಿಕೃಷ್ಣ (9620721299), ಸಾವಿತ್ರಮ್ಮ ಹೊಸದುರ್ಗ (8050036637) ಅವರನ್ನು ಸಂಪರ್ಕಿಸಬಹುದು.

# ಒಂಬುಡ್ಸ್‌ಮನ್ ಕಚೇರಿ ಪುನರಾರಂಭ

ದಾವಣಗೆರೆ, ಜು. 29- ಮಹಾತ್ಮ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಜಿ.ಪಂ.ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಒಂ ಬುಡ್ಸ್‌ಮನ್ ಕಚೇರಿಯನ್ನು ಕೋವಿಡ್-19 ರ ಸುರಕ್ಷತಾ ಕ್ರಮಗಳನ್ನು ಪಾಲಿಸುವುದ ರೊಂದಿಗೆ ಸಾರ್ವಜನಿಕರಿಗೆ ತಮ್ಮ ದೂರು ಗಳನ್ನು ಪರಿಹರಿಸಿಕೊಳ್ಳಲು ಪುನರಾರಂಭಿಸಲಾಗಿದೆ.

ಲಾಕ್‌ಡೌನ್‌ನಿಂದಾಗಿ ಸ್ಥಗಿತಗೊಂಡಿದ್ದ ಕಚೇರಿಯನ್ನು ಇದೀಗ ಪುನರಾರಂಭಿಸಲಾಗಿದೆ ಎಂದು ಜಿ. ಪಂ. ಸಿಇಓ ಡಾ. ವಿಜಯ ಮಹಾಂತೇಶ್ ದಾನಮ್ಮನವರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾರ್ಗಿಲ್ ಯೋಧರಿಗೆ ಸನ್ಮಾನ



**ರಾಣೇಬೆನ್ನೂರು**

ರಾಣೇಬೆನ್ನೂರು, ಜು.29- ರಾಜ್ಯ ಬಿಜೆಪಿ ನೇಕಾರ ಪ್ರಕೋಷ್ಠದ ವತಿಯಿಂದ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಕಾರ್ಗಿಲ್ ವಿಜಯೋತ್ಸವ ನಿಮಿತ್ತ ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿದ್ದ ನಿವೃತ್ತ ಯೋಧ ಜಯಪ್ರಕಾಶ್ ಅಂದಾನೆಪ್ಪ ಮೇಟಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಮಯದಲ್ಲಿ ರಾಜ್ಯ ನೇಕಾರ ಪ್ರಕೋಷ್ಠದ ಸಂಚಾಲಕ ಡಾ. ಬಸವರಾಜ ಕೇಲಗಾರ ಮಾತನಾಡಿ, ದೇಶದ ರಕ್ಷಣೆಗೆ ತಮ್ಮ ಪ್ರಾಣವನ್ನು ಲೆಕ್ಕಿಸದೇ ಹೋರಾಟ ಮಾಡಿದ್ದಾರೆ. ಅವರನ್ನು ಸನ್ಮಾನಿಸಿ, ಗೌರವಿಸುವ ಕೆಲಸ ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ ಎಂದರು. ಜಿಲ್ಲಾ ಸಂಚಾಲಕ ಶಿವಾನಂದ ಬಗಾದಿ, ತಾಲ್ಲೂಕು ಸಂಚಾಲಕ ಕಾಕಿ ರಾಮಣ್ಣ, ದ್ಯಾಮಣ್ಣ ಸುಂಕಾಪುರ, ವಿಶಾಲ್ ಗುಪ್ತಾ, ನಿವೃತ್ತ ಸೈನಿಕ ನಾಗೇಶ್ ತಳವಾರ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಭಾರತೀಯ ದಸಂಸ ಜಿಲ್ಲಾಧ್ಯಕ್ಷರಾಗಿ ಕೆ.ಡಿ.ಅಂಜಿನಪ್ಪ



**ಹರಪನಹಳ್ಳಿ**

ಹರಪನಹಳ್ಳಿ, ಜು.29- ಡಾ. ಹೆಚ್. ಪ್ರಕಾಶ್ ಬಿರಾದಾರ್ ಸ್ಥಾಪಿತ ಭಾರತೀಯ ದಲಿತ ಸಂಘರ್ಷ ಸಮಿತಿಯ ವಿಜಯನಗರ ಜಿಲ್ಲಾಧ್ಯಕ್ಷರಾಗಿ ತಾಲ್ಲೂಕಿನ ಅರಸೀಕೆರೆ ಗ್ರಾಮದ ಕೆ.ಡಿ. ಅಂಜಿನಪ್ಪ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಚಿತ್ರದುರ್ಗದಲ್ಲಿರುವ ಕೇಂದ್ರ ಕಚೇರಿಯಲ್ಲಿ ರಾಜ್ಯಾಧ್ಯಕ್ಷ ಡಾ.ಪ್ರಕಾಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ತಿಮ್ಮರಾಜ್, ರೈತ ಮೋರ್ಚಾ ರಾಜ್ಯಾಧ್ಯಕ್ಷ ಹನುಮಂತಪ್ಪ ಅವರು ನೇಮಕಾತಿ ಆದೇಶ ಪತ್ರ ವಿತರಿಸಿದ್ದಾರೆ.

# 27 ಪಾಸಿಟಿವ್, 10 ಗುಣಮುಖ

ದಾವಣಗೆರೆ, ಜು.29- ಜಿಲ್ಲೆಯಲ್ಲಿ ಗುರುವಾರ 27 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 10 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿ ಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 14, ಹರಿಹರ 3, ಚನ್ನಗಿರಿ 2, ಹೊನ್ನಾಳಿ 7 ಹಾಗೂ ಹೊರ ಜಿಲ್ಲೆ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

# ಒಬಿಸಿ-ಆರ್ಥಿಕ ಮೀಸಲಾತಿ

**(1ನೇ ಪುಟದಿಂದ)** ಪಿ.ಜಿ. ಸೀಟುಗಳ ಸಂಖ್ಯೆಯನ್ನು 30,191ರಿಂದ 54,275ಕ್ಕೆ ಹೆಚ್ಚಿಸಲಾಗಿದೆ. ಇದು ಶೇ.80ರ ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ 179 ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ವೈದ್ಯಕೀಯ ಕಾಲೇಜುಗಳ ಸಂಖ್ಯೆ 558ಕ್ಕೆ ತಲುಪಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

# ಸಾಮಾಜಿಕ ಕಳಕಳಿಯ, ಸದಭಿರುಚಿಯ ಕಿರುಚಿತ್ರ 'ಲಚುಮಿ'


ದಾವಣಗೆರೆ, ಜು. 29- ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಬಾಲ ಕಾರ್ಮಿಕ ಪದ್ಧತಿಯನ್ನು ವಿರೋಧಿಸುವ ಮತ್ತು ಕುಡಿತದಿಂದಾಗುವ ದುಷ್ಪರಿಣಾಮ ಕುರಿತ ಸಾಮಾಜಿಕ ಕಳಕಳಿಯ ಸಂದೇಶ ಸಾರುವ 'ಲಚುಮಿ' ಕಿರುಚಿತ್ರವನ್ನು ಸಾಮಾಜಿಕ ಜಾಲತಾಣ ಹಾಗೂ ಯೂಟ್ಯೂಬ್ ನಲ್ಲಿ ವೀಕ್ಷಣೆ ಮಾಡುವ ಮೂಲಕ ಬೆಂಬಲಿಸುವಂತೆ ಸಹೃದಯಿ ವೀಕ್ಷಕರಲ್ಲಿ ಚಿತ್ರದ ನಾಯಕ ನಟ ಜ್ಞಾನೇಶ್ವರ ಜವಳಿ ಮನವಿ ಮಾಡಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಹರ ತಾಲ್ಲೂಕಿನ ಬೆಳ್ಳೂಡಿ ಎಂಬ ಗ್ರಾಮೀಣ ಪರಿಸರದಲ್ಲಿ ಒಂದೇ ದಿನದಲ್ಲಿ ನಿರ್ಮಾಣಗೊಂಡಿರುವ ಮತ್ತು ಸ್ಥಳೀಯ ಪ್ರತಿಭೆಗಳನ್ನು ಒಳಗೊಂಡಿರುವ ಈ ಕಿರುಚಿತ್ರ ಇತ್ತೀಚಿಗೆ ಬಿಡುಗಡೆಗೊಂಡಿದೆ. ಇದೀಗ ಯೂಟ್ಯೂಬ್ ಸೇರಿದಂತೆ, ಇತರೆ ಸಾಮಾಜಿಕ ಜಾಲತಾಣಗಳಲ್ಲೂ ವೀಕ್ಷಿಸಲು ಸಿದ್ಧಗೊಂಡಿದೆ ಎಂದರು.

ಈ ಚಿತ್ರವನ್ನು ಯುವ ಪ್ರತಿಭೆ ಸಂಕೇತ್ ನಿರ್ದೇಶಿಸಿದ್ದು, ನಾಯಕ ನಟರಾಗಿ ಜ್ಞಾನೇಶ್ವರ ಜವಳಿ, ನಾಯಕಿಯಾಗಿ ಆಶಾ ಜಗದೀಶ್, ಲಚುಮಿ ಪಾತ್ರದಲ್ಲಿ ಬಾಲನಟಿ ಶ್ರೀಸನ್ನಿಧಿ, ರಮೇಶ್, ಬಸವರಾಜ್, ಮಹಾಂತೇಶ್ ಹುಗ್ಗಿ, ಕೃಷ್ಣ ಸಾ ರಾಜೋಳಿ, ಪಿ.ಎನ್. ಮಂಜುನಾಥ್, ತಿಪ್ಪೇಸ್ವಾಮಿ, ಜಗದೀಶ್ ಮತ್ತಿತರರು ನಟಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ನಾಯಕ ನಟ ಜ್ಞಾನೇಶ್ವರ ಜವಳಿ, ನಟಿ ಆಶಾ ಜಗದೀಶ್, ಬಾಲ ನಟಿ ಶ್ರೀಸನ್ನಿಧಿ, ಮಹಾಂತೇಶ್ ಹುಗ್ಗಿ, ಕೃಷ್ಣ ಸಾ ರಾಜೋಳಿ, ರಮೇಶ್ ಬಸವರಾಜ್, ಪಿ.ಎನ್. ಮಂಜುನಾಥ್, ಬೂಸ್ನೂರು ಗುರುಬಸಪ್ಪ, ಹೆಚ್.ಕೆ. ಹೇಮಣ್ಣ ಉಪಸ್ಥಿತರಿದ್ದರು.

# ಎಸ್‌ವಿಆರ್ ಅವರಿಗೆ ಸಚಿವ ಸ್ಥಾನ ನೀಡಲು ನಾಯಕ ಸಮಾಜದ ಆಗ್ರಹ




ಜಗಳೂರು, ಜು.29 - ಜಗಳೂರು ಕ್ಷೇತ್ರದ ಶಾಸಕ ಎಸ್.ವಿ.ರಾಮಚಂದ್ರ ಅವರಿಗೆ ದಾವಣಗೆರೆ ಜಿಲ್ಲೆಯ ಕೋಟಾದಡಿ ಸಚಿವ ಸ್ಥಾನ ನೀಡುವಂತೆ ಜಿಲ್ಲಾ ಬಿಜೆಪಿ ಎಸ್ಟಿ ಮೋರ್ಚಾ ಕಾರ್ಯದರ್ಶಿ ಬಿದರಕೆರೆ ರವಿ ಅವರು ಬಿಜೆಪಿ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಗುರುವಾರ ನಾಯಕ ಸಮಾಜದ ವತಿಯಿಂದ ನಡೆದ ಪತ್ರಿಕಾ ಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ತಾಲ್ಲೂಕು ಬಿಜೆಪಿ ಮಾಜಿ ಅಧ್ಯಕ್ಷರು, ನಾಯಕ ಸಮಾಜದ ಮುಖಂಡ ಕೃಷ್ಣಮೂರ್ತಿ ಮತ್ತು ಬಿಸ್ತುವಳ್ಳಿ ವಿಎಸ್‌ಎಸ್‌ಎನ್ ಅಧ್ಯಕ್ಷ ಬಿ. ಬಸವರಾಜು ಬಾಬು ಮಾತನಾಡಿ, ಮೂರು ಬಾರಿ ಶಾಸಕರಾಗಿ ಶಾಸಕರಾಗಿರುವ ರಾಮಚಂದ್ರರವರಿಗೆ ಸಚಿವ ಸ್ಥಾನ ನೀಡುವ ಮೂಲಕ ಹಿಂದುಳಿದ ಕ್ಷೇತ್ರಕ್ಕೆ ನ್ಯಾಯ ಒದಗಿಸಿಕೊಡುವಂತೆ ಕೇಂದ್ರ ಹಾಗೂ ರಾಜ್ಯ ಬಿಜೆಪಿ ಮುಖಂಡರನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಲ್ಲೇದೇವರಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಡಯ್ಯ, ನಾಯಕ ಸಮಾಜದ ಮುಖಂಡ ಮಂಜಣ್ಣ, ಪ. ಪಂ. ಸದಸ್ಯ ಪಾಪಲಿಂಗಪ್ಪ, ಮಡ್ರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಮಲ್ಲೇಶಪ್ಪ, ಕ್ಯಾಸನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜು, ಮುಖಂಡರುಗಳಾದ ಅಂಜಿನಪ್ಪ, ವಿಜಯ್‌ಕುಮಾರ್, ಮಾರುತಿ, ಸುರೇಶ್, ಹನುಮಂತಪ್ಪ ಸೇರಿದಂತೆ ಇತರರು ಗೋಷ್ಠಿಯಲ್ಲಿದ್ದರು.

# ಶಾಸಕಿ ಪೂರ್ಣಿಮಾಗೆ ಸಚಿವ ಸ್ಥಾನ ನೀಡಲು ಒತ್ತಾಯ



**ಜಗಳೂರು**

ಜಗಳೂರು, ಜು.29 - ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಯಾದವ ಸಮಾಜದ ಏಕೈಕ ಶಾಸಕರಾದ ಪೂರ್ಣಿಮಾ ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಯಾದವ ಸಮಾಜದ ತಾಲ್ಲೂಕು ಅಧ್ಯಕ್ಷ ಕೃಷ್ಣ ಮೂರ್ತಿ ಅವರು ಬಿಜೆಪಿ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಯಾದವ ಸಮಾಜದ ಜಿಲ್ಲಾ ಕಾರ್ಯದರ್ಶಿ ಹಾಲಸ್ವಾಮಿ ಮಾತನಾಡಿ, ಜಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ 3 ಬಾರಿ ಶಾಸಕರಾಗಿರುವ ಎಸ್.ವಿ.ರಾಮಚಂದ್ರ ಅವರಿಗೂ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಯಾದವ ಸಮಾಜದ ಮುಖಂಡರುಗಳಾದ ಗೊಲ್ಲರಹಟ್ಟಿ ತಿಪ್ಪೇಸ್ವಾಮಿ, ಬಾಲರಾಜು, ಇಂದ್ರೇಶ್, ಬಸವರಾಜು, ಮಹೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನಾಳೆ ಕೆಡಿಪಿ ಸಭೆ

ದಾವಣಗೆರೆ, ಜು.29- ಪ.ಜಾತಿ ಉಪಯೋಜನೆ, ಗಿರಿಜನ ಉಪಯೋಜನೆಗಳ ಅನುಷ್ಠಾನ ಕುರಿತಂತೆ ನಾಡಿದ್ದು 31 ರಂದು ಬೆಳಿಗ್ಗೆ 11 ಕ್ಕೆ ತಾ.ಪಂ.ನಲ್ಲಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ.


**15 ದಿನಗಳಲ್ಲಿ ನೇರ ಪರಿಹಾರ**

ದಿನದಲ್ಲಿ 5 ಕಿ.ಮೀ ವಾಕಿಂಗ್ ಹಾಗೂ ರಕ್ತ ಪರಿಚಲನೆಯಿಂದ ಶುಗರ್, ಬಿ.ಪಿ., ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ನಿದ್ರಾ ಹೀನತೆ, ಮಸಲ್ ಕ್ರ್ಯಾಂಪ್, ಮಂಡಿ, ಸೊಂಟ, ಬೆನ್ನು ನೋವು, ತೂಕದಲ್ಲಿ ಇಳಿಕೆ/ಏರಿಕೆ, ಇತ್ಯಾದಿಗಳಿಗೆ ಪರಿಹಾರ.

**ಗಂಗೋತ್ರಿ ವೆಲ್‌ನೆಸ್ ಸೆಂಟರ್**
ಲಾಯರ್ ರಸ್ತೆ, ಬಂಧನ್ ಬ್ಯಾಂಕ್ ಹತ್ತಿರ, ದಾವಣಗೆರೆ.
**86602 35013**

SSLC ಅಥವಾ PUC ಪಾಸ್/ಫೇಲ್ ಆದ ಮಹಿಳೆಯರು
**ರಿಸೆಪ್ಷನಿಸ್ಟ್ ಕೆಲಸಕ್ಕೆ ಬೇಕಾಗಿದ್ದಾರೆ**
ಕೆಲಸದ ಸಮಯ: 9 ರಿಂದ 6 ರವರೆಗೆ
ವೇತನ : 4500 + ಇನ್ಸೆಂಟಿವ್


**IN THE COURT OF THE HON'BLE LXXXV ADDITIONAL CITY CIVIL & SESSIONS JUDGE AT COMMERCIAL COURT, BANGALURU**

**Com. O.S. No. 1127 / 2019 (CCH - 86)**

**BETWEEN: M/s SAMARTH ENTERPRISES** Represented by its Proprietor viz., Sri G. SRIKANTH S/o Late H. Gopal Rao, Aged about 56 Years, office at: No. 15, 2nd Main Road, Tata Silk Farm, Basavanagudi, BENGALURE - 560 004. **...PLAINTIFF**

**AND**

**M/s. SRI NIDHI PHARMA** Rep by its Proprietrix viz., Miss ANUSHA & OTHERS **...DEFENDANTS**

**NOTICE TO THE DEFENDANTS**

**1. M/s. SRI NIDHI PHARMA Rep by its Proprietrix viz., Miss ANUSHA,** R/at: No. 2, 7th Main Road, Vinayaka Nagar, Wilson Garden, (Opposite to Wilson Garden) BENGALURU - 560 027.

**And also at**: No. 3823, Kuvempu Nagar, 17th Main Road, MCCB Block, DAVANAGERE - 577 004.

**2. Sri KUMAR RAO** S/o Not known, Age: Major

**3. Sri Ullas** S/o Sri Kumar Rao, Age: Major

Both are Residing at No. 3823, Kuvempu Nagar, 17th Main Road, MCCB Block, DAVANAGERE - 577 004.

Take notice that the Plaintiff has filed the above case against all of you for recovery of amount of **Rs. 29,75,000/- (Rupees Twenty Nine Lakhs Seventy Five Thousand Only)** along with 24% p.a. as interest.

All of you are hereby summoned to appear in this court in person or through pleader **on the 16.8.2021 at 11.0' Clock** to answer the same, failing which the matter will be heard and determined as ex-parte.

Given under my hand and seal of this Court the 27th day of July 2021.

**By order of the Court, Sheristedar, City Civil Court, Bengaluru.**

ADVOCATE FOR PLAINTIFF:
**Smt. VANI GOWDA K.B.,** Advocate
No. 7, 1st Floor, Door No. 20, 5th Cross, Sirsi Road, Chamarajpet, BANGALORE - 560 018.

# ಕಾಡಾ ಅಧ್ಯಕ್ಷೆ ಪವಿತ್ರ ರಾಮಯ್ಯ ಮುಂದುವರಿಕೆಗೆ ತೇಜಸ್ವಿ ಮನವಿ



ದಾವಣಗೆರೆ, ಜು.29- ಭದ್ರಾ ಕಾಡಾ ಅಧ್ಯಕ್ಷರಾದ ಪವಿತ್ರ ರಾಮಯ್ಯ ಅವರನ್ನೇ ಮುಂದು ವರಿಸಬೇಕೆಂದು ಭದ್ರಾ ಯೋಜನಾ ಮಟ್ಟದ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕ ತೇಜಸ್ವಿ ವಿ. ಪಟೇಲ್ ಅವರು ನೂತನ ಸಿ.ಎಂ. ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ರವಾನಿಸಿರುವ ಪಟೇಲ್ ಅವರು ಎಲ್ಲಾ ನೀರಾವರಿ ಯೋಜನೆಗಳಂತೆ ಭದ್ರಾ ಯೋಜನೆಯೂ ಕೊನೆಯ ಭಾಗದ ರೈತರ ಸಮಸ್ಯೆಯಿಂದ ಹೊರತಾಗಿರಲಿಲ್ಲ. ಹೀಗಿದ್ದರೂ ಪವಿತ್ರ ರಾಮಯ್ಯ ಅವರು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿದ್ದರಿಂದ ಹಲವು ವರ್ಷಗಳಿಂದ ನೀರಿನಿಂದ ವಂಚಿತರಾಗಿದ್ದ ಕೊನೆಯ ಭಾಗದ ರೈತರಿಗೆ ಕಳೆದ ಹಂಗಾಮಿನಲ್ಲಿ ಸಮರ್ಪಕವಾಗಿ ನೀರು ತಲುಪಿ, ಸಮೃದ್ಧ ಬೆಳೆ ಬೆಳೆದಿದ್ದಾರೆ.

ಇದೀಗ ಮುಖ್ಯಮಂತ್ರಿ ಬದಲಾವಣೆ ಆಗಿರುವುದರಿಂದ ಸಹಜವಾಗಿಯೇ ನಿಗಮ ಮಂಡಳಿಗಳಿಗೂ ಹೊಸ ಅಧ್ಯಕ್ಷರನ್ನು ನೇಮಕ ಮಾಡುವ ಸಾಧ್ಯತೆ ಇರುತ್ತದೆ. ಈ ಸಂದರ್ಭದಲ್ಲಿ ಪವಿತ್ರ ರಾಮಯ್ಯ ಅವರನ್ನು ಬದಲಾಯಿಸದೆ ಭದ್ರಾ ಕಾಡಾ ಅಧ್ಯಕ್ಷರನ್ನಾಗಿ ಮುಂದುವರೆಸುವಂತೆ ತೇಜಸ್ವಿ ಪಟೇಲ್ ಕೋರಿದ್ದಾರೆ.

# ಶ್ರಮಿಕ ವರ್ಗ ಇಲ್ಲದಿದ್ದರೆ ಸುಂದರ ಸಮಾಜದ ನಿರ್ಮಾಣ ಅಸಾಧ್ಯ

## ಹೊನ್ನಾಳಿಯಲ್ಲಿ ವಲಸೆ ಕಾರ್ಮಿಕರಿಗೆ ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್ ಮತ್ತು ಫುಡ್‌ಕಿಟ್ ವಿತರಣೆ

ಹೊನ್ನಾಳಿ, ಜು.29- ಕಾರ್ಮಿಕ ಇಲಾಖೆಯಲ್ಲಿರುವ ಸೌಲಭ್ಯಗಳನ್ನು ಕಡ್ಡಾಯವಾಗಿ ಅರ್ಹ ಫಲಾನುಭವಿಗಳಿಗೆ ಸಿಗುವಂತೆ ಕಾರ್ಮಿಕ ಇಲಾಖಾಧಿಕಾರಿಗಳು ಕ್ರಮ ಜರುಗಿಸಬೇಕು ಎಂದು ಹೊನ್ನಾಳಿಯ ಜೆಎಂಎಫ್‌ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಅರ್ಚನಾ ಕೆ. ಉನ್ನಿತಾನ್ ತಿಳಿಸಿದರು.

ಜೀನಹಳ್ಳಿ ಕ್ರಾಸ್‌ನ ಶ್ರೀ ರೇವಣಸಿದ್ದೇಶ್ವರ ಸ್ಟೋನ್ ಕ್ರಷಿಂಗ್‌ನಲ್ಲಿ ಕೆಲಸ ಮಾಡುತ್ತಿರುವ ವಲಸೆ ಕಾರ್ಮಿಕರಿಗೆ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಕಾರ್ಮಿಕ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್ ಮತ್ತು ಫುಡ್‌ಕಿಟ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಗಸ್ಟ್ 14 ರಂದು ತಾಲ್ಲೂಕು ಕಾನೂನು ಸೇವಾ ಸಮಿತಿ ವತಿಯಿಂದ ನ್ಯಾಯಾಲಯದ ಆವರಣದಲ್ಲಿ ಮೆಗಾ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಈ ಅದಾಲತ್‌ನಲ್ಲಿ ಬಾಕಿಯಿರುವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳುವಂತೆ ಸಲಹೆ ನೀಡಿದರು. ಅದಾಲತ್‌ನಲ್ಲಿ ಹಣಕಾಸಿಗೆ ಸಂಬಂಧಿಸಿದ ವ್ಯಾಜ್ಯಗಳು, ಚೆಕ್ಕು ಅಮಾನ್ಯ, ಬ್ಯಾಂಕ್ ಸಾಲ, ಆಸ್ತಿ ಪ್ರಕರಣಗಳು, ಭೂ ಸ್ವಾಧೀನ, ಜೀವನಾಂಶ ಪ್ರಕರಣಗಳು, ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವ ಅವಕಾಶವಿದೆ. ಇದರಿಂದ ಕಕ್ಷಿದಾರರ ಹಣ, ಸಮಯ ಮತ್ತು ಸಂಬಂಧಗಳನ್ನು ಉಳಿಸಿಕೊಂಡು ಸಮಾಜದಲ್ಲಿ ಸೌಹಾರ್ದತೆಯಿಂದ ಜೀವನ ನಡೆಸಬಹುದಾಗಿದೆ ಎಂದು ವಿವರಿಸಿದರು.



ಲೋಕ ಅದಾಲತ್‌ನಲ್ಲಿ ಒಮ್ಮೆ ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಂಡ ವ್ಯಾಜ್ಯಗಳಿಗೆ ದೇಶದ ಯಾವುದೇ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. ರಾಜೀ ಸಂಧಾನದ ಮೂಲಕ ಇತ್ಯರ್ಥವಾಗುವ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪಾವತಿಸಿದ ಶುಲ್ಕವನ್ನು ಮರಳಿ ಪಡೆಯಬಹುದು ಎಂದರು.

ವಕೀಲರಾದ ಬಿ. ಉಮೇಶ್ ಮಾತನಾಡಿ, ಶ್ರಮಿಕ ವರ್ಗ ಇಲ್ಲದಿದ್ದರೆ ಸುಂದರ ಸಮಾಜ ನಿರ್ಮಾಣ ಅಸಾಧ್ಯವಾಗಿದ್ದು ಕಾರ್ಮಿಕ ಇಲಾಖಾಧಿಕಾರಿಗಳು ಅರ್ಹ ಕಾರ್ಮಿಕರಿಗೆ ಇಲಾಖೆಯಲ್ಲಿರುವ ಸೌಲಭ್ಯಗಳ ಮಾಹಿತಿ ನೀಡಿ, ಅವರು ಇಲಾಖೆಯಲ್ಲಿರುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಕಾರ್ಮಿಕ ನಿರೀಕ್ಷಕ ರಾಜಶೇಖರಯ್ಯ ಹಿರೇಮಠ, ವಕೀಲ ಎಸ್.ಎನ್. ಪ್ರಕಾಶ್, ವಕೀಲರ ಸಂಘದ ಉಪಾಧ್ಯಕ್ಷ ಉಮಾಕಾಂತ್ ಜೋಯಿಸ್ ಮಾತನಾಡಿದರು.

ಶ್ರಮಜೀವಿ ಕಟ್ಟಡ ನಿರ್ಮಾಣ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಕೋರಿ ಯೋಗೀಶ್ ಕುಳಗಟ್ಟೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ನ್ಯಾಯಾಲಯದ ಸಿಬ್ಬಂದಿ ಪುಟ್ಟಕೆಂಚಪ್ಪ, ಸಂತೋಷ್, ಕ್ರಶರ್ ಮಾಲೀಕರಾದ ಧನಂಜಯ ಪಾಟೀಲ್, ಗದ್ದಿಗೇಶ್ ಪಾಟೀಲ್, ಸುಮಾ ಡಿ.ಪಾಟೀಲ್, ವ್ಯವಸ್ಥಾಪಕ ಬಿ.ಎನ್. ರಾಜು, ಸಿಬ್ಬಂದಿ ಬಸವರಾಜ್, ಅಪೂರ್ವ ಬಿಸ್ವಾಸ್, ಸಂತೋಷ್, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

# ಅಮೃತ್ ಯೋಜನೆ ವಿಸ್ತರಣೆಗೆ ಕೇಂದ್ರದ ಪರಿಶೀಲನೆ

ನವದೆಹಲಿ, ಜು. 29 – ಪ್ರಸಕ್ತ ಅಮೃತ್ ಯೋಜನೆಯಲ್ಲಿ ನಗರ ಪ್ರದೇಶಗಳ ಶೇ.60 ರಷ್ಟು ಜನರು ಮಾತ್ರ ಬರುತ್ತಿದ್ದು, ಇದನ್ನು ಎಲ್ಲ ನಗರ ಪ್ರದೇಶಗಳಿಗೆ ವಿಸ್ತರಿಸಲು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಖಾತೆ ಸಚಿವ ಹರ್‌ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

2015ರ ಜೂನ್‌ನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅಮೃತ್ ಯೋಜನೆ ಜಾರಿಗೆ ತಂದಿದ್ದರು. ನಗರ ಪ್ರದೇಶಗಳಲ್ಲಿ ಒಳಚರಂಡಿ ಹಾಗೂ ನೀರಿನ ವ್ಯವಸ್ಥೆ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿತ್ತು.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿರುವ ಪುರಿ, ಅಮೃತ್ ಯೋಜನೆಯನ್ನು ವಿಸ್ತರಿಸುವ ಕುರಿತು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಹೇಳಿಕೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.




ಅಂತರರಾಷ್ಟ್ರೀಯ ಹುಲಿ ದಿನಾಚರಣೆ ಅಂಗವಾಗಿ ಪಾಟ್ನಾದಲ್ಲಿ ಕಾಲೇಜು ವಿದ್ಯಾರ್ಥಿಗಳು ಮುಖವಾಡ ಧರಿಸಿ ಜಾಗೃತಿ ಮೂಡಿಸಿದರು.

# ಕೇಂದ್ರದ ಮೋದಿ ಸರ್ಕಾರ ಕಿವಿ, ಕಣ್ಣು ಎರಡೂ ಇಲ್ಲದಂತೆ ವರ್ತಿಸುತ್ತಿದೆ : ವೈ. ರಾಮಪ್ಪ



ದಾವಣಗೆರೆ, ಜು.29- ಕೊರೊನಾದಂತಹ ಮಹಾಮಾರಿ ಲಕ್ಷೋಪಲಕ್ಷ ಜನರನ್ನು ಬಲಿ ತೆಗೆದುಕೊಂಡು ದೇಶವೇ ತತ್ತರಿಸಿ ಹೋಗಿರುವ ಸಂದರ್ಭದಲ್ಲಿ ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್‌ಗಳ ಬೆಲೆಗಳನ್ನು ಗಗನಕ್ಕೇರಿಸಿ, ಸಾಮಾನ್ಯರ ಬದುಕು ದುಸ್ತರವಾಗುವಂತೆ ಕೇಂದ್ರ ಸರ್ಕಾರ ಮಾಡಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಡಾ.ವೈ.ರಾಮಪ್ಪ ಕಿಡಿ ಕಾರಿದ್ದಾರೆ.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ತ್ಯಾವಣಿಗಿಯಲ್ಲಿ ಇಂದು ಏರ್ಪಾಡಾಗಿದ್ದ ಬೃಹತ್ ಸೈಕಲ್ ಜಾಥಾದ ಸಂದರ್ಭದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

1973 ರಲ್ಲಿ ಕೇವಲ 7 ಪೈಸೆ ಪೆಟ್ರೋಲ್ ಬೆಲೆ ಜಾಸ್ತಿಯಾದಾಗ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ವಿರೋಧ ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಎತ್ತಿನ ಗಾಡಿಯಲ್ಲಿ ಹೋಗಿ ಲೋಕ ಸಭೆಗೆ ಮುತ್ತಿಗೆ ಹಾಕಿ, ಪ್ರತಿಭಟನೆ ನಡೆಸಿದ್ದರು. ಆದರೆ, ಇಂದು ಪೆಟ್ರೋಲ್, ಡೀಸೆಲ್ ಬೆಲೆ 100 ರೂ.ಗೂ ಅಧಿಕವಾಗಿದ್ದು ಸಾರ್ವಜನಿಕರ, ರೈತರ ಬದುಕನ್ನು ಅಸ್ಥಿರಗೊಳಿಸಿದೆ ಎಂದು ಅವರು ಹೇಳಿದರು.

ವರ್ಷಾನುಗಟ್ಟಲೇ ಕೇಂದ್ರ ಸರ್ಕಾರದ ವಿರುದ್ಧ ಕೃಷಿ ಕಾಯಿದೆ ವಿರೋಧಿಸಿ, ಪಂಜಾಬ್ ಗಡಿಭಾಗದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದರೂ ಅವರ ಬೇಡಿಕೆಗೆ ಸ್ಪಂದಿಸುತ್ತಿಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ದಿಕ್ಕರಿಸುವುದರ ಮೂಲಕ ನಿರಂಕುಶ ಅಧಿಕಾರದ ಆಡಳಿತವನ್ನು ನರೇಂದ್ರ ಮೋದಿ ಸರ್ಕಾರ ನಡೆಸುತ್ತಿದೆ ಎಂದರು.

ಸರ್ಕಾರದ ವರ್ತನೆ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಿರಂತರವಾಗಿ ನಡೆಯುತ್ತಲೇ ಇವೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರ ಕಿವಿ ಮತ್ತು ಕಣ್ಣು ಎರಡನ್ನೂ ನೋಡದ, ಕೇಳಿಸಲಾರದ ರೀತಿಯಲ್ಲಿ ವರ್ತಿಸುತ್ತಿದೆ ಎಂದು ರಾಮಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಪುಂಖಾನುಪುಂಖವಾಗಿ ಭಾಷಣ ಬಿಗಿಯುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಕುಟುಂಬ ರಾಜಕಾರಣದ ಬಗ್ಗೆ ಪದೇ ಪದೇ ಟೀಕಿಸುತ್ತಾರೆ. ಕರ್ನಾಟಕದ ಮುಖ್ಯಮಂತ್ರಿ ಆಯ್ಕೆಯಲ್ಲಿ ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿರುವುದೇಕೆ ? ಗಾಜಿನ ಮನೆಯಲ್ಲಿ ಕುಳಿತು ಇತರರತ್ತ ಕಲ್ಲು ಎಸೆಯುವ ಬಿಜೆಪಿಯವರ ನಡೆ ಅಸಂಸದೀಯ ವಾಗಿದೆ ಎಂದು ರಾಮಪ್ಪ ಜರಿದರು.

ಭರಮಸಾಗರ ಸಮೀಪದ ಇಸಾಮುದ್ರದಲ್ಲಿ ಬಾಲಕಿಯ ಮೇಲೆ ಕಿಡಿಗೇಡಿಗಳು ಅತ್ಯಾಚಾರ ವೆಸಗಿ ಕೊಲೆ ಮಾಡಿರುವ ಆರೋಪಿಗಳ ವಿರುದ್ಧ ಕಿಣ ಕ್ರಮ ಜರುಗಿಸಬೇಕು. ಮೂಡಿಗೆರೆಯಲ್ಲಿ ದಲಿತ ಯುವಕನಿಗೆ ಮೂತ್ರ ಕುಡಿಸಿ ಇಡೀ ದಲಿತ ಸಮುದಾಯಕ್ಕೆ ಅವಮಾನಗೊಳಿಸಿದ ಅಧಿಕಾರಿಗೆ ಕಾಯಂ ಶಿಕ್ಷೆಗೊಳಪಡಿಸಬೇಕೆಂದು ಎಂದು ಅವರು ಒತ್ತಾಯಿಸಿದರು.

# ಏರ್ ಇಂಡಿಯಾದ 738 ಕೋ.ರೂ. ಆಸ್ತಿ ಮಾರಾಟ

ನವದೆಹಲಿ, ಜು. 29 – 2015ರ ನಂತರ ಏರ್ ಇಂಡಿಯಾ ತನ್ನ 115 ಆಸ್ತಿಗಳನ್ನು 738 ಕೋಟಿ ರೂ.ಗಳಿಗೆ ಮಾರಿದೆ ಎಂದು ನಾಗರಿಕ ವಿಮಾನಯಾನ ಖಾತೆ ಅಧೀನ ಸಚಿವ ವಿ.ಕೆ ಸಿಂಗ್ ತಿಳಿಸಿದ್ದಾರೆ. 2018ರಲ್ಲಿ ರೂಪಿಸಲಾದ ಎ.ಐ.ಎಸ್.ಎ.ಎಂ. ಯೋಜನೆಯ ಅನ್ವಯ ಏರ್ ಇಂಡಿಯಾ ತನ್ನ ಸ್ಥಿರಾಸ್ತಿಗಳನ್ನು ನಗದೀಕರಿಸಿ, ಸಾಲದ ಹೊರೆ ಕಡಿಮೆ ಮಾಡಿಕೊಳ್ಳುತ್ತಿದೆ. ಮಾರ್ಚ್ 2019ರಂದು ಏರ್ ಇಂಡಿಯಾದ ಸಾಲದ ಹೊರೆ 60 ಸಾವಿರ ಕೋಟಿ ರೂ.ಗಳಿಗೆ ತಲುಪಿದೆ. ಪ್ರಸಕ್ತ ಸರ್ಕಾರ ಏರ್ ಇಂಡಿಯಾ ಮಾರುವ ಪ್ರಯತ್ನದಲ್ಲಿದೆ. ಸೆಪ್ಟೆಂಬರ್‌ನಲ್ಲಿ ಆಸಕ್ತಿದಾರರಿಂದ ಬಿಡ್ ಕರೆಯುವ ಸಾಧ್ಯತೆ ಇದೆ.

# ಬಾಂಬೆಗೆ ಹೊರಟಿದ್ದ ಆಂಧ್ರಪ್ರದೇಶದ ಬಾಲಕಿ ರಕ್ಷಣೆ

ದಾವಣಗೆರೆ, ಜು.29- ಬಾಂಬೆಗೆ ಹೊರಟಿದ್ದ ಆಂಧ್ರ ಪ್ರದೇಶ ಮೂಲದ ಬಾಲಕಿಯನ್ನು ಇಲ್ಲಿನ ರೈಲ್ವೆ ಪೊಲೀಸರು ರಕ್ಷಿಸಿದ್ದಾರೆ.

ಕಳೆದ 5-6 ದಿನಗಳ ಹಿಂದೆ ಆಂಧ್ರ ಪ್ರದೇಶದ ಬಾಲಕಿಯು ಮನೆ ಬಿಟ್ಟು ಬೆಂಗಳೂರು ಕಡೆಗೆ ರೈಲಿನಲ್ಲಿ ಪ್ರಯಾಣ ಬೆಳೆಸಿದ್ದಾಳೆ. ಹೀಗೆ ಬಂದ ಬಾಲಕಿ ನಂತರ ರೈಲಿನಲ್ಲಿ ಮುಂಬಯಿ ಕಡೆಗೆ ತೆರಳುತ್ತಿದ್ದಳು. ಈ ವಿಚಾರ ಆಂಧ್ರ ಪ್ರದೇಶದ ರೈಲ್ವೆ ಪೊಲೀಸರು ಬೆಂಗಳೂರಿಗೆ ವಿಚಾರ ತಿಳಿಸಿದ್ದಾರೆ. ಬೆಂಗಳೂರಿ ನಿಂದ ದಾವಣಗೆರೆ ರೈಲ್ವೆ ಪೊಲೀಸರಿಗೆ ಮಾಹಿತಿ ಬಂದ ಮೇಲೆ ಆ ಬಾಲಕಿಯನ್ನು ಇಲ್ಲಿ ರಕ್ಷಣೆ ಮಾಡಲಾಗಿದೆ. ಆಕೆಯ ಪೋಷಕರನ್ನು ಕರೆಸಿ, ಮನೆಗೆ ಕಳುಹಿಸ ಲಾಯಿತು ಎಂದು ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್ ಮುಸ್ತಾಕ್ ಅಹಮ್ಮದ್ ಡಿ. ಶೇಖ್ ತಿಳಿಸಿದ್ದಾರೆ.

# ಆ. 2ಕ್ಕೆ ಲಿಂಗೈಕ್ಯ ರಾಂಪುರ ಶ್ರೀ ಸ್ಮರಣೆ



ಹೊನ್ನಾಳಿ, ಜು.29- ತಾಲ್ಲೂಕಿನ ರಾಂಪುರ ಕ್ಷೇತ್ರದ ಶ್ರೀ ಸದ್ಗುರು ಶಿವಯೋಗಿ ಹಾಲ ಸ್ವಾಮೀಜಿ ಸಂಸ್ಥಾನದ ಲಿಂ. ವಿಶ್ವೇಶ್ವರ ಹಾಲಸ್ವಾಮೀಜಿ ಯವರ ಪ್ರಥಮ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಆಗಸ್ಟ್ 2 ರಂದು ಹೊನ್ನಾಳಿಯ ಅಂಬೇಡ್ಕರ್ ಭವನದಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಹೊನ್ನಾಳಿ ಎಂ. ಎಸ್. ಶಾಸ್ತ್ರಿ ಹೊಳೆಮಠ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಲಸ್ವಾಮೀಜಿಯವರ ಭಕ್ತರು ಹಾಗು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಲಿಂ. ವಿಶ್ವೇಶ್ವರ ಹಾಲಸ್ವಾಮಿಗಳ ಗುರು ಸ್ಮರಣೆ ಕಾರ್ಯಕ್ರಮ ನಡೆಯಲಿದೆ ಎಂದರು.

ಸಾನ್ನಿಧ್ಯವನ್ನು ಹೊನ್ನಾಳಿ ಶ್ರೀ ಚನ್ನಮಲ್ಲಿ ಕಾರ್ಜುನ ಸ್ವಾಮೀಜಿ, ಹೊಟ್ಯಾಪುರದ ಶ್ರೀ ಗಿರಿಸಿದ್ದೇಶ್ವರ ಸ್ವಾಮೀಜಿ, ರಾಂಪುರದ ಶಿವಕುಮಾರ ಹಾಲಸ್ವಾಮೀಜಿ ವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಹೊಸಹಳ್ಳಿ ತಿಪ್ಪೇಶ್, ಸಿಂಗಟಗೆರೆ ನಾಗರಾಜಯ್ಯ, ಮೆಡಿಕಲ್ ಶಿವಾನಂದ ಸ್ವಾಮಿ, ದೇವರಾಜ್, ಶ್ರೀನಿವಾಸ್, ಕುರುವ ಮಂಜುನಾಥ್ ಇನ್ನಿತರರಿದ್ದರು.

# ಸತೀಶ್ ಕೂಡ್ಲಿಗಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ



ಕೂಡ್ಲಿಗಿ, ಜು.29- ಪಂಚಮಸಾಲಿ ಸಮಾಜದ ಹೊಸಳ್ಳಿಯ ಎಚ್.ಬಿ. ಸತೀಶ್ ಕೊಟ್ಟೂರು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ್ದಾರೆ.

ಎಂಎಂಜೆ ಹರ್ಷವರ್ಧನ್, ಪಿ.ಎಚ್. ದೊಡ್ಡರಾಮಣ್ಣ, ಕಾವಲಿ ಶಿವಪ್ಪನಾಯಕ, ಗುಜ್ಜಲ್ ರಘು, ಸಿದ್ದಣ್ಣ ಸೇರಿದಂತೆ ಅನೇಕ ಮುಖಂಡರು ಪಾಲ್ಗೊಂಡಿದ್ದರು.

# ವಿದ್ಯಾನಗರ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಸುದರ್ಶನ್‌ಕುಮಾರ್



ದಾವಣ ಗೆರೆ, ಜು.29- ಲಯನ್ಸ್ ಕ್ಲಬ್ ದಾವಣಗೆರೆಯ ವಿದ್ಯಾನಗರ ಸಂಸ್ಥೆಯ ನೂತನ ಸಾಲಿನ ಅಧ್ಯಕ್ಷರಾಗಿ ಎಂ.ಎ. ಸುದರ್ಶನ್‌ಕುಮಾರ್, ಕಾರ್ಯದರ್ಶಿಯಾಗಿ ಬಿ.ದಿಳ್ಳೆಪ್ಪ, ಖಜಾಂಚಿ ಯಾಗಿ ಡಿ.ವಿ.ಗಿರೀಶ್ ಆಯ್ಕೆಯಾಗಿದ್ದಾರೆ.

ಕ್ಲಬ್‌ನ ಹಾಲಿ ಅಧ್ಯಕ್ಷ ಜಿ.ಎನ್.ಹೆಚ್.ಕುಮಾರ್ ಅವರ ಅಧ್ಯಕ್ಷೆ ಯಲ್ಲಿ ನಾಡಿದ್ದು ದಿನಾಂಕ 31ರ ಶನಿವಾರ ಬೆಳಿಗ್ಗೆ 11.30ಕ್ಕೆ ಮಾಗ ನೂರು ಬಸಪ್ಪ ಪದವಿ ಪೂರ್ವ ಕಾಲೇಜಿನಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಲಯನ್ಸ್ ನಿಕಟಪೂರ್ವ ಪ್ರಾಂತೀಯ ಅಧ್ಯಕ್ಷ ಎನ್.ವಿ.ಹರೀಶ್ ನೂತನ ಪದಾಧಿಕಾರಿಗಳನ್ನು ಪ್ರತಿಷ್ಠಾಪಿಸಲಿದ್ದಾರೆ.

# ನಿಟುವಳ್ಳಿಯಲ್ಲಿ ಇಂದು ಅಜ್ಜಿ ಹಬ್ಬ

ಆಷಾಢ ಮಾಸದ ಕೊನೆಯ ಶುಕ್ರ ವಾರದಂದು ಅಜ್ಜಿ ಹಬ್ಬವನ್ನು ಆಚರಿಸ ಲಾಗುವುದು. ಇಂದು ರಾತ್ರಿ 9 ರೊಳಗೆ ನಿಟುವಳ್ಳಿಯ ಶ್ರೀ ದುರ್ಗಾಂಬಿಕ ದೇವ ಸ್ಥಾನ ಹತ್ತಿರದ ಬೇವಿನ ಮರಕ್ಕೆ ಹೋಳಿಗೆ ಎಡೆಯನ್ನು (ಅಜ್ಜಿ ಅಮ್ಮ ನನ್ನು) ತಲುಪಿಸುವಂತೆ ಶ್ರೀ ದುರ್ಗಾಂಬಿಕ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಹೆಚ್.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ :
181 ಅಡಿ 4.5 ಇಂಚು
ಒಳ ಹರಿವು: 8055 ಕ್ಯೂಸೆಕ್ಸ್
ಹೊರ ಹರಿವು : 2812 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 153.11 ಅಡಿ

# ತೈಲ ಬೆಲೆ ಏರಿಕೆ ವಿರೋಧಿಸಿ ಸೈಕಲ್ ಜಾಥಾ

ದಾವಣಗೆರೆ, ಜು.29- ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದು, ಅಗತ್ಯ ವಸ್ತುಗಳ ಬೆಲೆಯೂ ಸಹ ಏರಿಕೆ ಯಾಗಿ ಜನಸಾಮಾನ್ಯರು, ಕೃಷಿ ಚಟುವ ಟಿಕೆಗಳ ಮೇಲೆ ತೀವ್ರ ಪರಿಣಾಮ ಬೀರು ತ್ತಿದ್ದು, ಈ ವರ್ಗವೂ ಬೆಲೆ ಏರಿಕೆಯಿಂದಾಗಿ ಬೀದಿಗೆ ಬರುವಂತಾಗಿದೆ ಎಂದು ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ವತಿಯಿಂದ ತ್ಯಾವಣಿಗಿಯಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಬೃಹತ್ ಸೈಕಲ್ ಜಾಥಾದ ನೇತೃತ್ವ ವಹಿಸಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ರೈತರು, ಕೂಲಿ ಕಾರ್ಮಿಕರು ಹಾಗೂ ಬಡವರ್ಗದ ಶ್ರಮಿಕ ವರ್ಗದವರಿಗೆ ಯೋಜನೆಗಳನ್ನು ರೂಪಿಸಿ ಆರ್ಥಿಕವಾಗಿ ಚೇತರಿಸಿಕೊಳ್ಳುವಂತೆ ಮಾಡಲಾಗಿತ್ತು ಎಂದು ಹೇಳಿದರು.



ಜಾಥಾದ ನೇತೃತ್ವವನ್ನು ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಜಿ. ನಾಗರಾಜ್ ವಹಿಸಿದ್ದರು. ಜಿ.ಪಂ. ಮಾಜಿ ಸದಸ್ಯ ಪಿ.ಸಿ.ಗೋವಿಂದಸ್ವಾಮಿ, ತ್ಯಾವಣಿಗೆ ಕಾಂಗ್ರೆಸ್ ಮುಖಂಡ ಲೋಹಿತಪ್ಪ, ಎಸ್.ಸಿ. ಘಟಕದ ಅಧ್ಯಕ್ಷ ಬಿ. ಹೆಚ್.ವೀರಭದ್ರಪ್ಪ, ಕತ್ತಲಗೆರೆ ತಿಪ್ಪಣ್ಣ, ಜಿ.ಪಂ. ಮಾಜಿ ಸದಸ್ಯ ರಾಮಪ್ಪ, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ. ಅಂಜಿನಪ್ಪ, ನಾಗರಾಜ್ ನಾಯ್ಕ, ಲೋಹಿತ್ ನಾಯ್ಕ್, ನಂಜಾನಾಯ್ಕ, ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಶಶಿಕಲಾ, ಯೂತ್ ಕಾಂಗ್ರೆಸ್ ಅಧ್ಯಕ್ಷ ಕಿರಣ್, ತಾ.ಪಂ. ಮಾಜಿ ಸದಸ್ಯರುಗಳಾದ ಹನುಮಂತಪ್ಪ, ಹರೋಸಾಗರ ಪ್ರಕಾಶ್, ತ್ಯಾವಣಿಗೆ ಕ್ಷೇತ್ರದ ತಾ.ಪಂ. ಸದಸ್ಯ ಗೌಡ್ರ ದೊಡ್ಡಘಟ್ಟ ಬಾಲಚಂದ್ರಪ್ಪ, ಗ್ರಾ.ಪಂ. ಸದಸ್ಯರಾದ ರಮೇಶ್, ಇರ್ಷಾದ್, ಶಶಿಕುಮಾರ್ ಹೆಚ್., ಅಲ್ಪಸಂಖ್ಯಾತರ ಅಧ್ಯಕ್ಷ ಹಿದಾಯತ್, ಅಸಂಘಟಿತ ಕಾರ್ಮಿಕರ ಅಧ್ಯಕ್ಷ ಚಿರಡೋಣಿ ಮಂಜುನಾಥ್, ಜಹೀರ್ ಪಟೇಲ್, ಮಂಜಾನಾಯ್ಕ, ಬೆಳಗೆರೆ ರಾಮಚಂದ್ರಪ್ಪ, ಹೂವಿನಮಡು ಚನ್ನಬಸಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte